ದಿನಾಂಕ 14.05.2014 ರಂದು ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ವೈದ್ಯಕೀಯ ಶಿಕ್ಷಣ, ಇವರ ಅಧ್ಯಕ್ಷತೆಯಲ್ಲಿ ಕೊಠಡಿ ಸಂಖ್ಯೆ. 105, ಮೊದಲನೇ ಮಹಡಿ, ವಿಕಾಸ ಸೌಧ, ಬೆಂಗಳೂರಿನಲ್ಲಿ ಜರುಗಿದ ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ 9ನೇ ಹಣಕಾಸು ಸಮಿತಿ ಸಭೆಯ ಸಭಾ ನಡುವಳಿಗಳು

ಸಭೆಯಲ್ಲಿ ಹಾಜರಿದ್ದ ಸದಸ್ಯರು

1. ಶ್ರೀ. ಎನ್. ಶಿವಶೈಲಂ, ಭಾ.ಆ.ಸೇ : ಅಧ್ಯಕ್ಷರು
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, (ವೈ.ಶಿ),
ಬೆಂಗಳೂರು

2. ಶ್ರೀ ನಾಗೇಂದ್ರ, : ಸದಸ್ಯರು
ಸರ್ಕಾರದ ಉಪ ಕಾರ್ಯದರ್ಶಿಗಳು,
ಆರ್ಥಿಕ ಇಲಾಖೆ, ಬೆಂಗಳೂರು

3. ಶ್ರೀ ಎಸ್.ಓ. ನಾರಯಣಪ್ಪ, : ಸದಸ್ಯರು
ನಿರ್ದೇಶಕರು, (ಎಂ & ಇ ವಿಭಾಗ),
ಯೋಜನಾ ಇಲಾಖೆ, ಬೆಂಗಳೂರು

4. ಶ್ರೀಮತಿ ಪ್ರಭಾವತಿ, : ಸದಸ್ಯರು
ಮುಖ್ಯ ಆಡಳಿತಾಧಿಕಾರಿಗಳು,
ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ,
ಆನಂದರಾವ್ ವೃತ್ತ, ಬೆಂಗಳೂರು

5. ಡಾ. ತಿಪ್ಪೇರುದ್ರಯ್ಯ.ಸಿ : ಸದಸ್ಯರು
ನಿರ್ದೇಶಕರು,
ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,
ರಾಯಚೂರು

6. ಡಾ. ಶ್ರೀನಿವಾಸ್‌ಮೂರ್ತಿ, : ಸದಸ್ಯರು
ವೈದ್ಯಕೀಯ ಅಧೀಕ್ಷಕರು,
ರಿಮ್ಸ್ ಬೋಧಕ ಆಸ್ಪತ್ರೆ, ರಾಯಚೂರು

7. ಶ್ರೀ ಟಿ. ನಾಗೇಶ್, : ಸದಸ್ಯರು
ಸಹಾಯಕ ಆಡಳಿತಾಧಿಕಾರಿಗಳು,
ರಿಮ್ಸ್, ರಾಯಚೂರು

(ಸೈಯದ್ ಜೀಯಾವುದ್ದೀನ್)
ಸದಸ್ಯ ಕಾರ್ಯದರ್ಶಿ,
ಹಾಗು ಆರ್ಥಿಕ ಸಲಹೆಗಾರರು,
ರಿಮ್ಸ್ ಆರ್ಥಿಕ ಸಮಿತಿ,
ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ.
ರಾಯಚೂರು

(ಡಾ. ತಿಪ್ಪೇರುದ್ರಯ್ಯ. ಸಿ)
ನಿರ್ದೇಶಕರು
ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,
ರಾಯಚೂರು

(ಎನ್. ಶಿವಶೈಲಂ) ಭಾ.ಆ.ಸೇ
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಹಾಗು ಅಧ್ಯಕ್ಷರು, ರಿಮ್ಸ್ ಆರ್ಥಿಕ ಸಮಿತಿ,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ,
ವೈದ್ಯಕೀಯ ಶಿಕ್ಷಣ, ಬೆಂಗಳೂರು

(ಎನ್. ಶಿವಶೈಲಂ)
ಸರ್ಕಾರದ ಪ್ರಧಾನ ಕಾರ್ಯದರ್ಶಿ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ

8. ಶ್ರೀ ಶಿವಾಜಿ ಲೋಕ್ರೆ, : ವಿಶೇಷ ಆಹ್ವಾನಿತರು
ಲೆಕ್ಕಪರಿಶೋಧಕರು,
ಮೆ॥ ಸುಬ್ರಮಣ್ಯಂ & ಕಂ. ರಾಯಚೂರು

9. ಶ್ರೀ ಸೈಯದ್ ಜೀಯಾವುದ್ದೀನ್, : ಸದಸ್ಯ ಕಾರ್ಯದರ್ಶಿ
ಆರ್ಥಿಕ ಸಲಹೆಗಾರರು,
ರಿಮ್ಸ್, ರಾಯಚೂರು

ಹಣಕಾಸು ಸಭೆಯ ಅಧ್ಯಕ್ಷರು ಸಭೆಯಲ್ಲಿ ಹಾಜರಿದ್ದ ಎಲ್ಲಾ ಸದಸ್ಯರನ್ನು ಸ್ವಾಗತಿಸಿ ಸಭೆಯನ್ನು ಪ್ರಾರಂಬಿಸಿದರು. ಅಜೆಂಡವಾರು ವಿಷಯಗಳನ್ನು ಈ ಕೆಳಗಿನಂತೆ ಚರ್ಚಿಸಲಾಯಿತು.

ವಿಷಯ ಸೂಚಿ ಸಂಖ್ಯೆ 1 : ದಿನಾಂಕ 23.01.2014ರಂದು ಜರುಗಿದ 8ನೇ ಆರ್ಥಿಕ ಸಮಿತಿ ಸಭೆಯ ಸಭಾ ನಡವಳಿಗಳನ್ನು ಓದಿ ದಾಖಲಿಸುವ ಬಗ್ಗೆ.

ದಿನಾಂಕ 23.01.2014ರಂದು ಜರುಗಿದ ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ 8ನೇ ಹಣಕಾಸು ಸಮಿತಿ ಸಭೆಯ ಅನುಪಾಲನಾ ವರದಿಯನ್ನು ಓದಿ ದಾಖಲಿಸಿ ಈ ಕೆಳಕಂಡ ಅಂಶಗಳೊಂದಿಗೆ ಅನುಮೋದಿಸಲಾಯಿತು.

| 8ನೇ ಆರ್ಥಿಕ ಸಮಿತಿ ಸಭೆಯ ವಿಷಯ ಸೂಚಿ ಸಂಖ್ಯೆ. | 8ನೇ ಆರ್ಥಿಕ ಸಮಿತಿ ಸಭೆಯ ತೀರ್ಮಾನ | 9ನೇ ಆರ್ಥಿಕ ಸಮಿತಿ ಸಭೆಯ ತೀರ್ಮಾನ |
|---|---|---|
| ವಿಷಯ ಸೂಚಿ ಸಂಖ್ಯೆ 1 : ದಿನಾಂಕ 15.02.2012 ರಂದು ಜರುಗಿದ ರಿಮ್ಸ್ ಸಂಸ್ಥೆಯ 7ನೇ ಹಣಕಾಸು ಸಭೆ ನಡುವಳಿಗೆ ಅನುಪಾಲನ ವರದಿಯನ್ನು ಓದಿ ದಾಖಲಿಸುವುದು. | ದಿನಾಂಕ 15.02.2012ರಂದು ಜರುಗಿದ 7ನೇ ಹಣಕಾಸು ಸಮಿತಿ ಸಭೆಯ ಅನುಪಾಲನಾ ವರದಿಯನ್ನು ಈ ಕೆಳಕಂಡ ಅಂಶಗಳೊಂದಿಗೆ ಓದಿ ದಾಖಲಿಸಿ ಅನುಮೋದಿಸಲಾಯಿತು.<br>1) ಅನುಪಾಲನ ವರದಿಯ ಕ್ರಮ ಸಂಖ್ಯೆ 04ರಲ್ಲಿ ಭಾರತೀಯ ವೈದ್ಯಕೀಯ ಮಂಡಳಿಯ ಅನುಮೋದನೆಗೆ ಅವಶ್ಯವಿರುವ ವಿವಿಧ ಬೋಧಕೇತರ ಹುದ್ದೆಗಳ ಫಲಿತಾಂಶವನ್ನು ಪ್ರಕಟಿಸದೇ ಇರುವುದನ್ನು ಗಮನಿಸಿ ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರ ಮಾರ್ಗದರ್ಶನದಂತೆ ಶಿವಮೊಗ್ಗ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ ಅನುಸರಿಸುವ ನೇಮಕಾತಿ ಮಾನದಂಡಗಳನ್ನೇ ಅನುಸರಿಸಲು ಅಭಿಪ್ರಾಯ ವ್ಯಕ್ತಪಡಿಸಿದರು.<br>2) ಅನುಪಾಲನ ವರದಿಯ ಕ್ರಮ ಸಂಖ್ಯೆ 06ರಲ್ಲಿ ಭಾರತೀಯ ವೈದ್ಯಕೀಯ ಮಂಡಳಿಯ ಅನುಮೋದನೆಗೆ ಅವಶ್ಯವಿರುವ ದೊಡ್ಡ ಮೊತ್ತದ ಕಲರ್ ಡಾಪುಲರ್, ಸಿಟಿ ಸ್ಕ್ಯಾನ್ ಉಪಕರಣಗಳನ್ನು ಸ್ವಾಯತ್ತ ಸಂಸ್ಥೆಗಳೇ ಟೆಂಡರ್ ಕರೆದು ಇತ್ಯರ್ಥ ಪಡಿಸುವಲ್ಲಿ ತುಂಬಾ ವಿಳಂಬವಾಗುತ್ತದೆ. ಇದನ್ನು ನಿರ್ದೇಶಕರು, ವೈದ್ಯಕೀಯ ಶಿಕ್ಷಣ, ಬೆಂಗಳೂರು ಇವರು ಓಪನ್ ಟೆಂಡರ್ ಕರೆದು ಸಂಸ್ಥೆಗೆ ಅವಶ್ಯವಿರುವ ಉಪಕರಣಗಳನ್ನು ಅಳವಡಿಸಿಕೊಳ್ಳಲು ಸೂಚಿಸಲಾಯಿತು. ಹಾಗು ನಿರ್ದೇಶಕರು, ರಿಮ್ಸ್, ರಾಯಚೂರು ಇವರು ನೂತನ ಬೋಧಕ ಆಸ್ಪತ್ರೆಗೆ ಗ್ಯಾಸ್ ಪೈಪ್ ಲೈನ್ ಅಳವಡಿಸುವ ಸಂಬಂಧ 114 ಲಕ್ಷಗಳು ಸರ್ಕಾರದಿಂದ ಬಿಡುಗಡೆಯಾಗಿದ್ದು, ಗ್ಯಾಸ್ ಪೈಪ್ ಲೈನ್ ಅಳವಡಿಸಲಾಗುವುದೆಂದು ಆರ್ಥಿಕ ಸಭೆಯ ಗಮನಕ್ಕೆ ತಂದರು. | 1) ಸರ್ಕಾರದ ಆದೇಶ ಸಂಖ್ಯೆ. ಆಕುಕ / 167 / ಎಂಪಿಎಸ್ / 2013 ರನ್ವಯ ಒಂದು ಬಾರಿಯ ಕ್ರಮವಾಗಿ ಸ್ವಾಯತ್ತ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಗಳಲಿ ಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳನ್ನು ಖಾಯಂಗೊಳಿಸುವ ಬಗ್ಗೆ ಆದೇಶವನ್ನು ಹಿಂಪಡೆದಿರುವುದರಿಂದ ಈ ವಿಷಯವನ್ನು ಮುಕ್ತಾಯಗೊಳಿಸಲಾಗಿದೆ.<br>2) ಸಂಸ್ಥೆಗೆ ಅವಶ್ಯವಿರುವ ವಿವಿಧ ಉಪಕರಣಗಳನ್ನು ನಿಯಾನುಸಾರ ಖರೀದಿಸಿ ಅವಳಡಿಸಿರುವುದರಿಂದ ಈ ವಿಷಯವನ್ನು ಮುಕ್ತಾಯಗೊಳಿಸಲಾಗಿದೆ. |

(ಸೈಯದ್ ಜೀಯಾವುದ್ದೀನ್)
ಸದಸ್ಯ ಕಾರ್ಯದರ್ಶಿ,
ಹಾಗು ಆರ್ಥಿಕ ಸಲಹೆಗಾರರು,
ರಿಮ್ಸ್ ಆರ್ಥಿಕ ಸಮಿತಿ,
ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ.
ರಾಯಚೂರು

(ಡಾ. ತಿಪ್ಪೇರುದ್ರಯ್ಯ. ಸಿ)
ನಿರ್ದೇಶಕರು
ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,
ರಾಯಚೂರು

(ಎನ್. ಶಿವಶೈಲಂ) ಭಾ.ಆ.ಸೇ
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಹಾಗು ಅಧ್ಯಕ್ಷರು, ರಿಮ್ಸ್ ಆರ್ಥಿಕ ಸಮಿತಿ,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
ವೈದ್ಯಕೀಯ ಶಿಕ್ಷಣ, ಬೆಂಗಳೂರು

**(ಎನ್. ಶಿವಶೈಲಂ)**
**ಸರ್ಕಾರದ ಪ್ರಧಾನ ಕಾರ್ಯದರ್ಶಿ**
**ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ**

ವಿಷಯ ಸೂಚಿ ಸಂಖ್ಯೆ 2 : ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ 2009-10, 2010-11 ಹಾಗು 2011-12ನೇ ಸಾಲಿನ ಚಾರ್ಟೆಡ್ ಅಕೌಂಟೆಂಟರಿಂದ ಮಾಡಿಸಲಾದ ಲೆಕ್ಕ ಪರಿಶೋಧನಾ ವರದಿಯನ್ನು ಅಂಗೀಕರಿಸುವ ಕುರಿತು.

ರಿಮ್ಸ್ ಸಂಸ್ಥೆಯ 2009-10, 2010-11 ಮತ್ತು 2011-12ನೇ ಸಾಲಿಗೆ ಚಾರ್ಟೆಡ್ ಅಕೌಂಟೆಂಟರಿಂದ ಮಾಡಿಸಲಾದ ಲೆಕ್ಕಪರಿಶೋಧನಾ ವರದಿಯನ್ನು ಈ ಕೆಳಕಂಡ ಅಂಶಗಳೊಂದಿಗೆ ಪರಿಶೀಲಿಸಿ ಅನುಮೋದಿಸಲಾಯಿತು.

1) 2009-10ನೇ ಸಾಲಿನಲ್ಲಿ ರೂ. 13 ಕೋಟಿ ಹಣ ಉಳಿತಾಯವಾಗಿರುವುದನ್ನು ಆರ್ಥಿಕ ಸಮಿತಿಯು ಗಮನಿಸಿ ಹಣ ಬಳಕೆಯಾಗದೇ ಇರುವ ಬಗ್ಗೆ ಚರ್ಚಿಸಲಾಯಿತು. ಚಾರ್ಟೆಡ್ ಅಕೌಂಟೆಂಟ್ ಇವರು ಆರ್ಥಿಕ ವರ್ಷದ ಕೊನೆಯಲ್ಲಿ ಸರ್ಕಾರದಿಂದ ಬಿಡುಗಡೆಯಾಗುವ ಅನುದಾನವನ್ನು ಮುಂದಿನ ವರ್ಷದಲ್ಲಿ ಬಳಕೆಯಾಗುತ್ತದೆ ಎಂದು ತಿಳಿಸಿದರು ಹಾಗು ನಿರ್ದೇಶಕರು, ರಿಮ್ಸ್, ರಾಯಚೂರು ಇವರು ಸಂಸ್ಥೆಯಲ್ಲಿ ಸಂಗ್ರಹಿಸಲಾಗುವ ಹಾಸ್ಟೇಲ್, ಮೆಸ್ ಠೇವಣಿ ಹಣದಿಂದ ಈ ರೀತಿ 13 ಕೋಟಿಗಳ ಹಣ ಉಳಿತಾಯವಾಗಿದೆಯೆಂದು ಸಭೆಯ ಗಮನಕ್ಕೆ ತಂದರು.

2) 2009-10ನೇ ಸಾಲಿನಲ್ಲಿ ರೂ. 88,79,132/-ಗಳ ಹಣವು ಹೆಚ್ಚುವರಿಯಾಗಿ ಉಳಿತಾಯವಾಗಿರುವುದಕ್ಕೆ ಚಾರ್ಟೆಡ್ ಅಕೌಂಟೆಂಟ್ ಇವರ ಸರ್ಕಾರದಿಂದ ಮಂಜೂರಾದ ಹುದ್ದೆಗಳಲ್ಲಿ ಕೆಲ ಹುದ್ದೆಗಳು ಖಾಲಿ ಇರುವುದರಿಂದ ಹಾಗು ಸರ್ಕಾರವು ಮಂಜೂರಾದ ಹುದ್ದೆಗಳಿಗೆ ಅನುಗುಣವಾಗಿ ವೇತನವನ್ನು ಬಿಡುಗಡೆ ಮಾಡುತ್ತಿರುವುದರಿಂದ ಈ ರೀತಿ ಹಣ ಉಳಿತಾಯವಾಗುತ್ತದೆಯೆಂದು ಸಭೆಯ ಗಮನಕ್ಕೆ ತಂದರು.

3) ರೂ. 8,31,000/-ಗಳು ಸಂಸ್ಥೆಯಲ್ಲಿ **Mis appropriation** ಆಗಿರುವ ಬಗ್ಗೆ ಆರ್ಥಿಕ ಸಮಿತಿಯು ಕಳವಳ ವ್ಯಕ್ತ ಪಡಿಸಿ ಕೂಡಲೇ ಸಂಬಂಧ ಪಟ್ಟ ಸಿಬ್ಬಂದಿ ಹಾಗು ಅಂದಿನ ನಿರ್ದೇಶಕರಿಗೆ **Show Cause Notice** ಹಾಗು ವಿಭಾಗೀಯ ತನಿಖೆಯನ್ನು ನಡೆಸುವಂತೆ ನಿರ್ದೇಶಕರು, ವೈದ್ಯಕೀಯ ಶಿಕ್ಷಣ, ಬೆಂಗಳೂರು ಇವರಿಗೆ ಸೂಚಿಸಿದರು. ಮತ್ತು ಈ ಬಗ್ಗೆ ನಿರ್ದೇಶಕರು, ರಿಮ್ಸ್, ರಾಯಚೂರು ಇವರಿಗೆ ಸರ್ಕಾರಕ್ಕೆ ವಿವರವಾದ ಪ್ರಸ್ತಾವನೆಯನ್ನು ಸಲ್ಲಿಸುವಂತೆ ಸೂಚಿಸಲಾಯಿತು.

4) ಮಾನ್ಯ ಕಾರ್ಯದರ್ಶಿಗಳು, ಇಲ್ಲಿಯವರೆಗೆ 8 ಆರ್ಥಿಕ ಸಮಿತಿ ಸಭೆಗಳು ಜರುಗಿದ್ದು, ಮೂರು ವರ್ಷದ ಆಡಿಟ್ ವರದಿಯನ್ನು ಮಂಡಿಸಿರುವುದಕ್ಕೆ ಕಳವಳ ವ್ಯಕ್ತಪಡಿಸಿದರು ಹಿಂದಿನ ನಿರ್ದೇಶಕರುಗಳ ಆಡಳಿತ ಅವಧಿಯಲ್ಲಿ ಕಡತಗಳನ್ನು ಸರಿಯಾಗಿ ನಿರ್ವಹಿಸದೇ ಇರುವುದರಿಂದ ಆಡಿಟ್ ವರದಿಯನ್ನು ತಯಾರಿಸಲು ತೊಂದರೆಯಾಗಿರುವುದರಿಂದ ಆರ್ಥಿಕ ಸಮಿತಿ ಸಭೆಯಲ್ಲಿ ಮಂಡಿಸಲು ವಿಳಂಬವಾಗಿದೆಯೆಂದು ಹಾಗು ಪ್ರಸ್ತುತ ಎಲ್ಲಾ ಕಡತಗಳು ಕ್ರಮವಾಗಿ ನಡೆಯುತ್ತಿವೆಯೆಂದು ನಿರ್ದೇಶಕರು ಸಭೆಯ ಗಮನಕ್ಕೆ ತಂದರು. ಮಾನ್ಯ ಕಾರ್ಯದರ್ಶಿಗಳು ಇನ್ನು ಮುಂದೆ ಆಯಾ ಆರ್ಥಿಕ ವರ್ಷದ ನಂತರ ಲೆಕ್ಕ ಪರಿಶೋಧನಾ ವರದಿಯನ್ನು ಕೂಡಲೇ ಕೈಗೊಂಡು ಆರ್ಥಿಕ ಸಮಿತಿ ಸಭೆಯಲ್ಲಿ ಮಂಡಿಸಲು ಸೂಚಿಸಿಲಾಯಿತು. 2009-10 ಮತ್ತು 2010-11ನೇ ಆಡಿಟ್ ವರದಿಯನ್ನು ಮಂಡಿಸಲು ವಿಳಂಭಕ್ಕೆ ಕಾರಣರಾದ ಹಿಂದಿನ ನಿರ್ದೇಶಕರಿಗೆ **Show Cause Notice** ನೀಡಲು ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇವರಿಗೆ ಸೂಚಿಸಲಾಯಿತು.

5) ಸಂಸ್ಥೆಯಲ್ಲಿ ಆರ್ಥಿಕ ವರ್ಷಗಳಲ್ಲಿ ಉಳಿತಾಯವಾಗುವ ಅನುದಾನವನ್ನು ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿ ಠೇವಣಿ ಇಡದೇ ಇರುವುದಕ್ಕೆ ಸಂಸ್ಥೆಗೆ ಆರ್ಥಿಕ ನಷ್ಟ ಉಂಟಾಗಿದೆಯೆಂದು ತಿಳಿಸಿ ಠೇವಣಿ ಇಡದೇ ಇರುವುದಕ್ಕೆ ಹಿಂದಿನ ನಿರ್ದೇಶಕರಿಗೆ **Show Cause Notice** ನೀಡಲು ನಿರ್ದೇಶಕರು, ವೈದ್ಯಕೀಯ ಶಿಕ್ಷಣ, ಬೆಂಗಳೂರು ಇವರಿಗೆ ಸೂಚಿಸಲಾಯಿತು.

1) ರೂ. 8,31,000/- ಗಳು ಸಂಸ್ಥೆಯಲ್ಲಿ **Mis appropriation** ಆಗಿರುವ ಬಗ್ಗೆ ಸರ್ಕಾರದ ಗಮನಕ್ಕೆ ಹಾಗೂ ಸರ್ಕಾರದ ಕಾರ್ಯದರ್ಶಿಗಳ ಅಪ್ಪ ಕಾರ್ಯದರ್ಶಿಗಳ ಗಮನಕ್ಕೆ ತಂದಿರುವುದರಿಂದ ಈ ವಿಷಯವನ್ನು ಮುಕ್ತಾಯ ಗೊಳಿಸಲಾಯಿತು.

2) ಆರ್ಥಿಕ ವರ್ಷಗಳಲ್ಲಿ ಉಳಿತಾಯವಾಗಿರುವ ಅನುದಾನವನ್ನು ಈಗಾಗಲೇ ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿ ಠೇವಣಿ ಇಟ್ಟಿರುವುದರಿಂದ ಸದರಿ ವಿಷಯವನ್ನು ಮುಕ್ತಾಯ ಗೊಳಿಸಲಾಯಿತು.

(ಸೈಯದ್ ಜೀಯಾವುದ್ದೀನ್)
ಸದಸ್ಯ ಕಾರ್ಯದರ್ಶಿ,
ಹಾಗು ಆರ್ಥಿಕ ಸಲಹೆಗಾರರು,
ರಿಮ್ಸ್ ಆರ್ಥಿಕ ಸಮಿತಿ,
ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,
ರಾಯಚೂರು.

(ಡಾ. ತಿಪ್ಪೇರುದ್ರಯ್ಯ. ಸಿ)
ನಿರ್ದೇಶಕರು
ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,
ರಾಯಚೂರು

(ಎನ್. ಶಿವಶೈಲಂ) ಭಾ.ಆ.ಸೇ
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಹಾಗು ಅಧ್ಯಕ್ಷರು, ರಿಮ್ಸ್ ಆರ್ಥಿಕ ಸಮಿತಿ,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
ವೈದ್ಯಕೀಯ ಶಿಕ್ಷಣ, ಬೆಂಗಳೂರು

**(ಎನ್. ಶಿವಶೈಲಂ)**
**ಸರ್ಕಾರದ ಪ್ರಧಾನ ಕಾರ್ಯದರ್ಶಿ**
**ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ**

6) ರಿಮ್ಸ್ ಬೋಧಕ ಆಸ್ಪತ್ರೆಗೆ ಅವಶ್ಯವಿರುವ ಜೀವ ರಕ್ಷಕ ಔಷಧಿಗಳು, ಕೆಮಿಕಲ್ಸ್, ಶಸ್ತ್ರಚಿಕಿತ್ಸೆಗೆ ಸಂಬಂಧಿಸಿದ ಉಪಕರಣಗಳು ಹಾಗು ಲೆನಿನ್ ನ್ನು ಖರೀದಿಸಲು ಪ್ರತ್ಯೇಕವಾಗಿ ಲೆಕ್ಕಶೀರ್ಷಿಕೆಗಳನ್ನು (ಖಾತೆಗಳನ್ನು) ನಿರ್ವಹಿಸಲು ನಿರ್ದೇಶಕರು ಹಾಗು ಆರ್ಥಿಕ ಸಲಹೆಗಾರರಿಗೆ ಸೂಚಿಸಲಾಯಿತು.

7) ರಿಮ್ಸ್ ಬೋಧಕ ಆಸ್ಪತ್ರೆಗೆ 2011-12ನೇ ಸಾಲಿನಲ್ಲಿ ಅತಿ ಕಡಿಮೆ ರೂ. 71,160/-ಗಳನ್ನು ಮಾತ್ರ ಲೆನಿನ್ ಖರೀದಿ ಮಾಡಿರುವುದಕ್ಕೆ ಕಾರ್ಯದರ್ಶಿಗಳು ಆಕ್ಷೇಪಿಸಿದರು. ನಂತರ ಆರ್ಥಿಕ ಸಲಹೆಗಾರರು ಹಾಗು ಮುಖ್ಯ ಆಡಳಿತಾಧಿಕಾರಿಗಳು, ರಿಮ್ಸ್, ರಾಯಚೂರು ಇವರಿಗೆ ಪರಿಶೀಲಿಸಿ ಹಿಂದಿನ ವರ್ಷದಲ್ಲಿ ಲೆನಿನ್ ಖರೀದಿ ಮಾಡಿರುವ ವಿವರವನ್ನು ಸರ್ಕಾರಕ್ಕೆ ಸಲ್ಲಿಸುವಂತೆ ಸೂಚಿಸಲಾಯಿತು.

8) ಆಸ್ಪತ್ರೆಯ ತಂತ್ರಾಂಶ ನಿರ್ವಹಣೆಯ ಬಗ್ಗೆ ಪ್ರತಿ ಮಾಹೆ ರೂ. 1,83,000/-ಗಳು ಹಾಗು ವಾರ್ಷಿಕವಾಗಿ ರೂ. 21,96,000/-ಗಳನ್ನು ವಿನಿಯೋಗಿಸುವುದಕ್ಕೆ ಕಾರ್ಯದರ್ಶಿಗಳು ಈ ಮೊತ್ತ ಅಧಿಕವಾಗುತ್ತದೆಯೆಂದು ತಿಳಿಸಿದರು, ನಂತರ ಮಾನ್ಯ ನಿರ್ದೇಶಕರು, ರಿಮ್ಸ್, ರಾಯಚೂರು ಇವರು ಆಸ್ಪತ್ರೆಯಲ್ಲಿ ಒಟ್ಟು 16 ಗಣಕ ಯಂತ್ರ ಸಿಬ್ಬಂದಿಗಳು ಕಾರ್ಯನಿರ್ವಹಿಸುತ್ತಿರುವುದರಿಂದ ಪ್ರತಿ ಮಾಹೆ ವೇತನಕ್ಕಾಗಿಯೇ ಹೆಚ್ಚು ಹಣ ಹೋಗುತ್ತಿರುವುದಾಗಿ ತಿಳಿಸಿದರು ಹಾಗು ಆಸ್ಪತ್ರೆಯ ತಂತ್ರಾಂಶ ನಿರ್ವಹಣೆಯ ಟೆಂಡರ್ ಕರೆದು ಇತ್ಯರ್ಥಗೊಳಿಸಿದಲ್ಲಿ ಪ್ರತಿ ತಿಂಗಳು ಮ ಇರು ಲಕ್ಷವಾಗುತ್ತದೆ. ಕಾರಣ ಸರ್ಕಾರಕ್ಕೆ ಆರ್ಥಿಕ ಹೊರೆಯನ್ನು ತಪ್ಪಿಸಲು ಟೆಂಡರ್‌ದಾರರು ಹಳೆಯ ದರದಲ್ಲಿಯೇ ಆಸ್ಪತ್ರೆಯ ತಂತ್ರಾಂಶ ನಿರ್ವಹಣೆಯನ್ನು ಮಾಡುವುದಾಗಿ ತಿಳಿಸಿರುವುದರಿಂದ ಟೆಂಡರ್‌ದಾರರಾದ ಮೆ॥ ಆಕ್ಸಸ್ ಇನ್ನೋಟೆಕ್‌ಲಜಿ ಇವರ ಅವಧಿಯನ್ನು ವಿಸ್ತರಿಸಲಾಗಿದೆಯೆಂದು ಸಭೆಯ ಗಮನಕ್ಕೆ ತಂದರು.

3) ನಿಮಾನ್ಸ್ ಆಸ್ಪತ್ರೆಯಲ್ಲಿ ಅಳವಡಿಸಿ ಕೊಳ್ಳಲಾಗಿರುವ ಎನ್.ಐ.ಸಿ ಸಾಫ್ಟವೇರ್‌ನ್ನು ಸಂಸ್ಥೆಯಲ್ಲಿ ಅಳವಡಿಸ ಆರ್ಥಿಕ ಸಮಿತಿಯು ಸೂಚಿಸಿರುವುದರಿಂದ ಈ ವಿಷಯವನ್ನು ಮುಕ್ತಾಯ ಗೊಳಿಸಲಾಯಿತು.

9) ವೈದ್ಯಕೀಯ ಬಿಲ್ಲುಗಳನ್ನು ಮರು ಪಾವತಿಸಲು ಕೋರಿ ಸಲ್ಲಿಸುವ ಸಿಬ್ಬಂದಿಗಳ ವೈದ್ಯಕೀಯ ಬಿಲ್ಲುಗಳನ್ನು ರೂ. 50,000/-ಕ್ಕಿಂತ ಮೇಲಿದ್ದಲ್ಲಿ ಅದನ್ನು ಸರ್ಕಾರಕ್ಕೆ ಸಲ್ಲಿಸಲು ನಿರ್ದೇಶಕರು, ರಿಮ್ಸ್, ರಾಯಚೂರು ಇವರಿಗೆ ಆರ್ಥಿಕ ಸಮಿತಿ ಸಭೆಯು ಸೂಚಿಸಿತು.

10) ಭಾರತೀಯ ವೈದ್ಯಕೀಯ ಮಂಡಳಿ ತಪಾಸಣೆಯ ಸಮಯದಲ್ಲಿ ಖರ್ಚಾಗಿರುವ ರೂ. 11,25,354/-ಗಳನ್ನು ಈ ರೀತಿ ಪ್ರಸ್ತಾಪಿಸದೇ ಇನ್ನು ಮುಂದೆ ಹೊರಗುತ್ತಿಗೆಯ ವೇತನ ಅಥವಾ ಇತರ ವೆಚ್ಚದಲ್ಲಿ ತೋರಿಸಲು ಆರ್ಥಿಕ ಸಲಹೆಗಾರರು, ರಿಮ್ಸ್, ರಾಯಚೂರು ಇವರಿಗೆ ಸೂಚಿಸಲಾಯಿತು.

ವಿಷಯ ಸೂಚಿ ಸಂಖ್ಯೆ 3 : ಮಹಾಲೇಖಪಾಲರು, ಬೆಂಗಳೂರು ಇವರಿಂದ ಜರುಗಿದ ಲೆಕ್ಕಪತ್ರ ತಪಾಸಣೆಯ ವರದಿಯ ಅನುಪಾಲನೆ ಮತ್ತು ಕೈಗೊಂಡ ಕ್ರಮಗಳ ಬಗ್ಗೆ ಮಾಹಿತಿ ನೀಡುವ ಕುರಿತು.

ನಿರ್ದೇಶಕರು, ರಿಮ್ಸ್, ರಾಯಚೂರು ಇವರು ಮಹಾಲೇಖಪಾಲರು, ಬೆಂಗಳೂರು ಇವರು ಸಲ್ಲಿಸಿರುವ ಅನುಪಾಲನ ವರದಿಯನ್ನು ಪ್ರಾರಂಭಿಸಿ ಬಹುತೇಕ ಆಕ್ಷೇಪಣೆಗಳು ಜಿಲ್ಲಾ ಆಸ್ಪತ್ರೆಯು ರಿಮ್ಸ್ ಬೋಧಕ ಆಸ್ಪತ್ರೆಯಾಗಿ ಅಸ್ತಿತ್ವಕ್ಕೆ ಬರುವುದಕ್ಕಿಂತ ಹಿಂದಿನವು ಎಂದು ವಿವರಿಸಿದರು.

ಮಹಾಲೇಖಪಾಲರು, ಬೆಂಗಳೂರು ಇವರು ಸಲ್ಲಿಸಿರುವ ಎಲ್ಲಾ ಪ್ಯಾರಗಳು ಬಹು ಮುಖ್ಯವಾದವುಗಳೇ ಆಗಿರುವುದರಿಂದ ಹಿಂದಿನ ನಿರ್ದೇಶಕರುಗಳಿಗೆ **Show Cause Notice** ನೀಡಲು ನಿರ್ದೇಶಕರು, ವೈದ್ಯಕೀಯ ಶಿಕ್ಷಣ, ಬೆಂಗಳೂರು ಇವರಿಗೆ ಸೂಚಿಸಲಾಯಿತು.

ನಂತರ **No. Pr.AG(G&SSA) / OAD – Spl.Cell / F / 1048 / 2012-13 / 50 Dated 01.01.2013**ರಲ್ಲಿ ಮಹಾಲೇಖಪಾಲರು, ಬೆಂಗಳೂರು ಇವರು ಮರು ಸಲ್ಲಿಸಿರುವ ಆಕ್ಷೇಪಣೆಗಳಿಗೆ ಅನುಪಾಲನ ವರದಿಯನ್ನು ಪೂರಕ ಮಾಹಿತಿಗಳೊಂದಿಗೆ ಸಲ್ಲಿಸುವಂತೆ ಹಾಜರಿದ್ದ ಆರ್ಥಿಕ ಸಲಹೆಗಾರರು ಹಾಗು ಮುಖ್ಯ ಆಡಳಿತಾಧಿಕಾರಿಗಳು, ರಿಮ್ಸ್, ರಾಯಚೂರು ಇವರಿಗೆ ಸೂಚಿಸಲಾಯಿತು

ಪ್ಯಾರವೈಜ್ ಅನುಪಾಲನೆಯನ್ನು ಕಂಡಿಕೆವಾರು ಸಿದ್ದಪಡಿಸಿ, ಮಹಾಲೇಖಪಾಲರು, ಬೆಂಗಳೂರ ಹಾಗೂ ಸರ್ಕಾರಕ್ಕೆ ಸಲ್ಲಿಸುವಂತೆ ಸೂಚಿಸಲಾಯಿತು.

(ಸೈಯದ್ ಜಿಯಾವುದ್ದೀನ್)
ಸದಸ್ಯ ಕಾರ್ಯದರ್ಶಿ,
ಹಾಗು ಆರ್ಥಿಕ ಸಲಹೆಗಾರರು,
ರಿಮ್ಸ್ ಆರ್ಥಿಕ ಸಮಿತಿ,
ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,
(ರಾಯಚೂರು)

(ಡಾ. ತಿಪ್ಪೇರುದ್ರಯ್ಯ. ಸಿ)
ನಿರ್ದೇಶಕರು
ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,
ರಾಯಚೂರು

(ಎನ್. ಶಿವಶೈಲಂ) ಭಾ.ಆ.ಸೇ
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಹಾಗು ಅಧ್ಯಕ್ಷರು, ರಿಮ್ಸ್ ಆರ್ಥಿಕ ಸಮಿತಿ,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
ವೈದ್ಯಕೀಯ ಶಿಕ್ಷಣ, ಬೆಂಗಳೂರು

(ಎನ್. ಶಿವಶೈಲಂ)
ಸರ್ಕಾರದ ಪ್ರಧಾನ ಕಾರ್ಯದರ್ಶಿ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ

ವಿಷಯ ಸೂಚಿ ಸಂಖ್ಯೆ 4 : ರಿಮ್ಸ್ ಸಂಸ್ಥೆಯ 2013–14 ನೇ ಸಾಲಿನ ಆಯವ್ಯಯ ಅಂದಾಜು ಪಟ್ಟಿಗೆ ಅನುಮೋದನೆ ನೀಡುವ ಕುರಿತು

ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ 2013–14ನೇ ಸಾಲಿನ ವೈದ್ಯಕೀಯ ಕಾಲೇಜು ಮತ್ತು ಬೋಧಕ ಆಸ್ಪತ್ರೆಗೆ ಆಯವ್ಯಯದ ಅಂದಾಜು ಪಟ್ಟಿಯನ್ನು ನಿರ್ದೇಶಕರು ರಿಮ್ಸ್, ರಾಯಚೂರು ಇವರು ವೈದ್ಯಕೀಯ ಕಾಲೇಜಿಗೆ ಲೆಕ್ಕಶಿರ್ಷಿಕೆ 2210–05–105–1–40–101 (ಯೋಜನೆ) ಅಡಿಯಲ್ಲಿ ವಾರ್ಷಿಕವಾಗಿ ರೂ. 35,74,69,000/–ಗಳು, ರಿಮ್ಸ್ ಬೋಧಕ ಆಸ್ಪತ್ರೆಗೆ 2210–05–105–1–40–101 (ಯೋಜನೇತರ) ಅಡಿಯಲ್ಲಿ ರೂ. 11,21,84,000/–ಗಳು ಹಾಗು ಲೆಕ್ಕ ಶಿರ್ಷಿಕೆ 4210–03–105–1–02–386 (ಯೋಜನೆ) ಅಡಿಯಲ್ಲಿ ನಿಗದಿ ಪಡಿಸಿರುವ ಕುರಿತು ಆರ್ಥಿಕ ಸಮಿತಿ ಸಭೆಯ ಗಮನಕ್ಕೆ ತಂದರು ಹೀಗೆ 2013–14ನೇ ಸಾಲಿಗೆ ಒಟ್ಟು ರೂ. 174,61,00,000/–ಗಳ ಅಂದಾಜು ಪಟ್ಟಿಯನ್ನು ಈ ಕೆಳಕಂಡತೆ ಪರಿಶೀಲಿಸಿ ಸರ್ವಾನುಮತದಿಂದ ಅನುಮೋದನೆ ನೀಡಲಾಯಿತು.

**ALLOCATION OF BUDGET FOR THE YEAR 2013-14**
**FOR MEDICAL COLLEGE & TEACHING HOSPITAL, RIMS RAICHUR**

| Sl. No. | Details of Head of Account (Head of Account 2210-05-105-1-40-101 (Plan) | Quarterly Required | Budget Proposed For the 2013-14 |
|---|---|---|---|
| | **MEDICAL COLLEGE** | | |
| 1 | Salaries (Teaching & Non Teaching Staff) | 7,42,06,000/- | 29,68,24,000/- |
| 2 | House Surgeons and PG students Internship | 55,50,000/- | 2,22,00,000/- |
| 3 | Office and Other Expanses | 21,63,000/- | 86,52,000/- |
| 4 | Electricity and Water | 32,73,250/- | 1,30,93,000/- |
| 5 | Outsource staff Salary (Hospital Computer Maintainance, Security & Cleanning) | 37,50,000/- | 1,50,00,000/- |
| 6 | ETP Operating and Maintainance | 4,25,000/- | 17,00,000/- |
| | TOTAL | 8,93,67,250/- | 35,74,69,000/- |

**RIMS TEACHING HOSPITAL**

| Sl. No. | Details of Head of Account (Head of Account 2210-05-105-1-40-101 (Non Plan) | Quarterly Required | Budget Proposed For the 2013-14 |
|---|---|---|---|
| 1 | Salaries of officers | 60,12,250/- | 2,40,49,000/- |
| 2 | Drugs And Chemicals | 1,22,20,000/- | 4,88,80,000/- |
| 3 | Office and Other Expanses | 35,58,750/- | 1,42,35,000/- |
| 4 | Equipments and Instruments | 27,50,000/- | 1,10,00,000/- |
| 5 | Mateirials, Supply, Linen & Bedding | 13,75,000/- | 55,00,000/- |
| 6 | Diet and HNS | 21,30,000/- | 85,20,000/- |
| | TOTAL | 2,80,46,000/- | 11,21,84,000/- |

| Sl. No. | Details of Head of Account (Head of Account 4210-03-105-1-02-386 (Plan) | Quarterly Required | Budget Proposed For the 2013-14 |
|---|---|---|---|
| 1 | Equipments and Instruments for college | 1,99,65,000/- | 7,98,60,000/- |
| 2 | Furnitures | 68,75,000/- | 2,75,00,000/- |
| 3 | Building Maintainance | 29,94,750/- | 1,19,79,000/- |
| 4 | Purchasing of Medical Books | 13,31,000/- | 53,24,000/- |
| 5 | 3rd Phase construction | 19,12,50,000/- | 76,50,00,000/- |
| 6 | New 520 bedded hospital 5th and 6th floor construction | 1,00,00,000/- | 4,00,00,000/- |
| 7 | Purchasing of Equipments and Furnitures to New 520 Bedded Hospital | 8,66,96,000/- | 34,67,84,000/- |
| | TOTAL | 31,91,11,750/- | 127,64,47,000/- |

2013–14ನೇ ಸಾಲಿಗೆ ಅವಶ್ಯವಿರುವ ಒಟ್ಟು ರೂ. 174,61,00,000/–ಗಳ ಅಂದಾಜು ಪಟ್ಟಿಯನ್ನು ಸರ್ಕಾರಕ್ಕೆ ಸಲ್ಲಿಸಿರುವುದರಿಂದ ಈ ವಿಷಯವನ್ನು ಮುಕ್ತಾಯ ಗೊಳಿಸಲಾಗಿದೆ.

(ಸೈಯದ್ ಜೀಯಾವುದ್ದೀನ್)
ಸದಸ್ಯ ಕಾರ್ಯದರ್ಶಿ,
ಹಾಗು ಆರ್ಥಿಕ ಸಲಹೆಗಾರರು,
ರಿಮ್ಸ್ ಆರ್ಥಿಕ ಸಮಿತಿ,
ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,
ರಾಯಚೂರು

(ಡಾ. ತಿಪ್ಪೇರುದ್ರಯ್ಯ. ಸಿ)
ನಿರ್ದೇಶಕರು
ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,
ರಾಯಚೂರು

(ಎನ್. ಶಿವಶೈಲಂ) ಭಾ.ಆ.ಸೇ
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಹಾಗು ಅಧ್ಯಕ್ಷರು, ರಿಮ್ಸ್ ಆರ್ಥಿಕ ಸಮಿತಿ,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
ವೈದ್ಯಕೀಯ ಶಿಕ್ಷಣ, ಬೆಂಗಳೂರು
(ಎನ್. ಶಿವಶೈಲಂ)
ಸರ್ಕಾರದ ಪ್ರಧಾನ ಕಾರ್ಯದರ್ಶಿ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ

| | | |
|---|---|---|
| ವಿಷಯ ಸೂಚಿ ಸಂಖ್ಯೆ 05 : ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಅವರಣದಲ್ಲಿ ನೂತನವಾಗಿ ನಿರ್ಮಾಣಗೊಂಡಿರುವ 520 ಹಾಸಿಗೆಗಳ ಬೋಧಕ ಆಸ್ಪತ್ರೆಗೆ ಅವಶ್ಯವಿರುವ ಉಪಕರಣ ಹಾಗೂ ಪೀಠೋಪಕರಣಗಳನ್ನು ಒಟ್ಟು ರೂ. 34,67,83,616/- ಗಳ ವೆಚ್ಚದಲ್ಲಿ ಖರೀದಿಸಲು ಅನುಮತಿ ನೀಡುವ ಬಗ್ಗೆ. | ರಿಮ್ಸ್ ಅವರಣದಲ್ಲಿ ನೂತನವಾಗಿ ನಿರ್ಮಾಣಗೊಂಡಿರುವ ಬೋಧಕ ಆಸ್ಪತ್ರೆಗೆ ಅತಿ ಅವಶ್ಯಕವಾಗಿ ಬೇಕಾಗಿರುವ ರೂ. 34,67,83,616/- ಗಳ ಪೀಠೋಪಕರಣ ಹಾಗು ಜೀವರಕ್ಷಕ ಉಪಕರಣಗಳನ್ನು ಸಂಸ್ಥೆಯಲ್ಲಿ ಅನುದಾನದ ಲಭ್ಯತೆಯಿದ್ದಲ್ಲಿ ಮಾತ್ರ ಕರ್ನಾಟಕ ಸಾರ್ವಜನಿಕ ಸಂಗ್ರಹಣಾ ಪಾರದರ್ಶಕತೆ ಅಧಿನಿಯಮ 1999 ಹಾಗು ನಿಯಮ 2002ರನ್ವಯ ನಿಯಮಾನುಸಾರ ಟೆಂಡರ್ ಮೂಲಕ ಖರೀದಿಸಲು ಆರ್ಥಿಕ ಸಮಿತಿ ಸಭೆಯು ಸರ್ವಾನುಮತದಿಂದ ಅನುಮೋದನೆಯನ್ನು ನೀಡಿತು. | ನಿಯಮಾನುಸಾರ ಟೆಂಡರ್ ಕರೆದು ಅಂತಿಮಗೊಳಿಸಲಾಗಿದ್ದು, ಟೆಂಡರ್ ಮೊತ್ತವು 5 ಕೋಟಿ ಮೀರಿ ಕ್ಯಾಬಿನೆಟ್ ಅನುಮತಿ ನೀಡಿರುವುದರಿಂದ ಈ ವಿಷಯವನ್ನು ಮುಕ್ತಾಯಗೊಳಿಸಲಾಗಿದೆ. |
| ವಿಷಯ ಸೂಚಿ ಸಂಖ್ಯೆ 6 : ಭಾರತೀಯ ವೈದ್ಯಕೀಯ ಮಂಡಳಿಯ ತಪಾಸಣೆ ಸಮಯದಲ್ಲಿ ಹಾಗು ಪರೀಕ್ಷಾ ವೇಳೆಯಲ್ಲಿ ಪರೀಕ್ಷಾ ಮೇಲ್ವಿಚಾರಿಕರಿಗೆ ಅತಿಥಿ ಉಪಚಾರಕ್ಕಾಗಿ ತಗುಲುವ ವೆಚ್ಚವನ್ನು ಮರು ಪಾವತಿಸಲು ಅನುಮತಿ ನೀಡುವ ಬಗ್ಗೆ. | ಸಮಯದ ಅಭಾವದಿಂದ ಸದರಿ ಪ್ರಸ್ತಾವನೆಯನ್ನು ಚರ್ಚಿಸಲಾಗದೇ ಮುಂದಿನ ಆರ್ಥಿಕ ಸಮಿತಿ ಸಭೆಯಲ್ಲಿ ಮಂಡಿಸಲು ಸೂಚಿಸಲಾಯಿತು. | ಸಂಸ್ಥೆಯ ಆಡಳಿತ ವೆಚ್ಚದಲ್ಲಿ ಪಾವತಿಸುವಂತೆ ಆರ್ಥಿಕ ಸಮಿತಿ ಸಭೆಯ ಅನುಮೋದನೆ ನೀಡಿರುವುದರಿಂದ ಈ ವಿಷಯವನ್ನು ಮುಕ್ತಾಯಗೊಳಿಸಲಾಗಿದೆ. |
| ವಿಷಯ ಸೂಚಿ ಸಂಖ್ಯೆ 7 : ಡಾ. ಗುರುಶಾಂತಪ್ಪ. ಜಿ. ನಂದೂರ್‌ಕರ್, ಸಹ ಪ್ರಾಧ್ಯಾಪಕರು, ರೇಡಿಯಾಲಜಿ ವಿಭಾಗ ಇವರಿಗೆ ಬಳಕೆದಾರರ ನಿಧಿಯಿಂದ ರೂ. 30,000/- ಗಳ ವೇತನ ಪಾವತಿಸುತ್ತಿರುವ ಕುರಿತು ಘಟನೋತ್ತರ ಮಂಜೂರಾತಿ ನೀಡುವ ಬಗ್ಗೆ. | ರೇಡಿಯಾಲಜಿ ವಿಭಾಗದಲ್ಲಿ ಪದವಿ ಪಡೆದ ತಜ್ಞ ವೈದ್ಯರು ದೊರೆಯುವುದು ತುಂಬಾ ವಿರಳವಾಗಿರುವುದರಿಂದ, ಎಂ.ಸಿ.ಐ ಮಾನ್ಯತೆಗೆ ತಜ್ಞ ವೈದ್ಯರ ಅವಶ್ಯಕತೆಯಿರುವುದರಿಂದ ಹಾಗು ರೋಗಿಗಳ ಚಿಕಿತ್ಸೆಗೆ ಡಾ. ಗುರುಶಾಂತಪ್ಪ. ಜಿ. ನಂದೂರ್‌ಕರ್, ಸಹ ಪ್ರಾಧ್ಯಾಪಕರು, ರೇಡಿಯಾಲಜಿ ವಿಭಾಗ ಇವರ ಸೇವೆಯು ಅತಿ ಅವಶ್ಯವಾಗಿರುವುದರಿಂದ ಸಾರ್ವಜನಿಕ ಹಾಗು ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಮತ್ತು ಎಂ.ಸಿ.ಐ ನಿಯಮಾವಳಿಯನ್ನು ಪೂರೈಸಲು ಈ ಸಂಸ್ಥೆಯ ಆಡಳಿತ ಮಂಡಳಿ ಸಭೆಯಲ್ಲಿ ತೀರ್ಮಾನಿಸಿದಂತೆ ಬಳಕೆದಾರರ ನಿಧಿಯಿಂದ ರೂ. 30,000/-ಗಳನ್ನು ಪಾವತಿಸುತ್ತಿರುವ ಕುರಿತು ಆರ್ಥಿಕ ಸಮಿತಿ ಸಭೆಯ ಘಟನೋತ್ತರ ಅನುಮೋದನೆಯನ್ನು ಸರ್ವಾನುಮತದಿಂದ ನೀಡಿತು. | ರೇಡಿಯಾಲಜಿ ವಿಭಾಗದಲ್ಲಿ ಕಾರ್ಯನಿರ್ವಹಿಸುತ್ತಿರುವ ಡಾ. ಗುರುಶಾಂತಪ್ಪ. ಜಿ. ನಂದೂರ್‌ಕರ್, ಸಹ ಪ್ರಾಧ್ಯಾಪಕರು ಇವರಿಗೆ ಬಳಕೆದಾರರ ನಿಧಿಯಿಂದ ರೂ. 30,000/-ಗಳನ್ನು ಈಗಾಗಲೇ ಪಾವತಿಸುತ್ತಿರುವ ಈ ವಿಷಯವನ್ನು ಮುಕ್ತಾಯಗೊಳಿಸಲಾಗಿದೆ. |

(ಸ್ಯೆಯಜ್ ಜೀಯಾವುದ್ದೀನ್)
ಸದಸ್ಯ ಕಾರ್ಯದರ್ಶಿ,
ಹಾಗು ಆರ್ಥಿಕ ಸಲಹೆಗಾರರು,
ರಿಮ್ಸ್ ಆರ್ಥಿಕ ಸಮಿತಿ,
ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,
ರಾಯಚೂರು

(ಡಾ. ತಿಪ್ಪೇರುದ್ರಯ್ಯ. ಸಿ)
ನಿರ್ದೇಶಕರು
ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,
ರಾಯಚೂರು

(ಎನ್. ಶಿವಶೈಲಂ) ಭಾ.ಆ.ಸೇ
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಹಾಗು ಅಧ್ಯಕ್ಷರು, ರಿಮ್ಸ್ ಆರ್ಥಿಕ ಸಮಿತಿ,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ,
ವೈದ್ಯಕೀಯ ಶಿಕ್ಷಣ, ಬೆಂಗಳೂರು

**(ಎನ್. ಶಿವಶೈಲಂ)**
**ಸರ್ಕಾರದ ಪ್ರಧಾನ ಕಾರ್ಯದರ್ಶಿ**
**ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ**

| | | |
|---|---|---|
| ವಿಷಯ ಸೂಚಿ ಸಂಖ್ಯೆ 8 : ನಿರ್ದೇಶಕರು ಹಾಗು ಸಂಸ್ಥೆಯ ಸಿಬ್ಬಂದಿಗಳು ಸರ್ಕಾರದ ಹಂತದಲ್ಲಿ ಜರುಗುವ ಸಭೆಗಳು ಹಾಗು ಸಂಸ್ಥೆಯ ಇತರ ಕೆಲಸ ಕಾರ್ಯಗಳ ನಿಮಿತ್ತ ಬೆಂಗಳೂರು ಹಾಗು ಇತರ ಸ್ಥಳಗಳಲ್ಲಿ ವಾಸ್ತವ್ಯ ಮಾಡಿದಾಗ ವಸತಿ ಗೃಹದ ವೆಚ್ಚವನ್ನು ಮರು ಪಾವತಿಸಲು ಅನುಮತಿ ನೀಡುವ ಬಗ್ಗೆ. | ಸಮಯದ ಅಭಾವದಿಂದ ಸದರಿ ಪ್ರಸ್ತಾವನೆಯನ್ನು ಚರ್ಚಿಸಲಾಗದೇ ಮುಂದಿನ ಆರ್ಥಿಕ ಸಮಿತಿ ಸಭೆಯಲ್ಲಿ ಮಂಡಿಸಲು ಸೂಚಿಸಲಾಯಿತು. | ಸಂಸ್ಥೆಯ ಆಡಳಿತ ವೆಚ್ಚದಲ್ಲಿ ಪಾವತಿಸುವಂತೆ ಆರ್ಥಿಕ ಸಮಿತಿ ಸಭೆಯ ಅನುಮೋದನೆ ನೀಡಿರುವುದರಿಂದ ಈ ವಿಷಯವನ್ನು ಮುಕ್ತಾಯಗೊಳಿಸಲಾಗಿದೆ. |
| ವಿಷಯ ಸೂಚಿ ಸಂಖ್ಯೆ 9 : ಹೊಸದಾಗಿ ನಿರ್ಮಾಣವಾಗುತ್ತಿರುವ 520 ಹಾಸಿಗೆಗಳ ಬೋಧಕ ಆಸ್ಪತ್ರೆಗೆ ಅವಶ್ಯವಿರುವ 110 ಹೆಚ್ಚುವರಿ ಸ್ವಚ್ಚತಾ ಹಾಗು ಭದ್ರತಾ ಸಿಬ್ಬಂದಿಗಳನ್ನು ಹೆಚ್ಚುವರಿಯಾಗಿ ನೇಮಕ ಮಾಡಿಕೊಳ್ಳಲು ಅನುಮತಿ ನೀಡುವ ಬಗ್ಗೆ. | ರಿಮ್ಸ್ ಅವರಣದಲ್ಲಿ ನೂತನವಾಗಿ ನಿರ್ಮಾಣಗೊಂಡಿರುವ ಬೋಧಕ ಆಸ್ಪತ್ರೆಗೆ ಹಳೆಯ ಜಿಲ್ಲಾ ಆಸ್ಪತ್ರೆಯನ್ನು ಸ್ಥಳಾಂತರಿಸಿದ ಸಮಯದಲ್ಲಿ 520 ಹಾಸಿಗೆ + ಹಳೆಯ ಬೋಧಕ ಆಸ್ಪತ್ರೆಯ 250 ಹಾಸಿಗೆ ಸೇರಿ 770 ಹಾಸಿಗೆಗಳ ಸಾಮಾರ್ಥ್ಯ ಹೊಂದುವುದರಿಂದ ಸ್ವಚ್ಚತಾ ಮತ್ತು ಭದ್ರತಾ ಸಿಬ್ಬಂದಿಗಳ ಕೊರತೆ ಉಂಟಾಗುವುದನ್ನು ಗಮನಿಸಿ ಹಾಗು ಸ್ವಚ್ಚತೆ & ಭದ್ರತೆಯನ್ನು ಕಾಪಾಡುವ ಹಿತದೃಷ್ಟಿಯಿಂದ ಈಗ ಕಾರ್ಯನಿರ್ವಹಿಸುತ್ತಿರುವ (80 ಸ್ವಚ್ಚತೆ + 50 ಗೃಹರಕ್ಷಕ ಸಿಬ್ಬಂದಿ) 130 ಸಿಬ್ಬಂದಿಗಳನ್ನು ಹೊರತು ಪಡಿಸಿ ಹೆಚ್ಚುವರಿಯಾಗಿ 110 (80 ಸ್ವಚ್ಚತೆ + 30 ಭದ್ರತೆ) ಸಿಬ್ಬಂದಿಗಳನ್ನು ನೂತನ ಆಸ್ಪತ್ರೆಯು ಪ್ರಾರಂಭವಾದ ನಂತರ ಹೊರಗುತ್ತಿಗೆಯ ಮೂಲಕ ನಿಯಾಮಾನುಸಾರ ಟೆಂಡರ್ ಕರೆದು ನೇಮಕಾತಿ ಮಾಡಿಕೊಳ್ಳಲು ಆರ್ಥಿಕ ಸಮಿತಿ ಸಭೆಯು ಸರ್ವಾನುಮತದಿಂದ ಅನುಮೋದನೆಯನ್ನು ನೀಡಿತು. | ನೂತನ ಬೋಧಕ ಆಸ್ಪತ್ರೆಯನ್ನು ಪ್ರಾರಂಭಿಸಿದ ನಂತರ ಈ ಬಗ್ಗೆ ಕ್ರಮ ಕೈಗೊಳ್ಳಲು ಆರ್ಥಿಕ ಸಮಿತಿ ಸಭೆಯು ಸೂಚಿಸಿತು. |
| ವಿಷಯ ಸೂಚಿ ಸಂಖ್ಯೆ 10 : ರಿಮ್ಸ್ ಸಂಸ್ಥೆಯ ಲೆಕ್ಕಪರಿಶೋಧನೆಯನ್ನು ನಿರ್ವಹಿಸುವ ಚಾರ್ಟೆಡ್ ಅಕೌಂಟೆಂಟ್ ಇವರಿಗೆ ವಾರ್ಷಿಕವಾಗಿ ವೇತನವನ್ನು ನಿಗದಿಪಡಿಸಿ ಕಾರ್ಯದೇಶವನ್ನು ನೀಡಲು ಅನುಮತಿ ನೀಡುವ ಬಗ್ಗೆ. | ಸಂಸ್ಥೆಯ ಲೆಕ್ಕಪರಿಶೋಧನೆಯನ್ನು ನಿರ್ವಹಿಸುವ ಶ್ರೀ ಪಿ.ಕೆ. ಸುಬ್ರಮಣ್ಯಮಂ, ಚಾರ್ಟೆಡ್ ಅಕೌಟೆಂಟ್ ಇವರಿಗೆ ವಾರ್ಷಿಕವಾಗಿ ರೂ. 53,000/- (ಸೇವಾ ತೆರಿಗೆ ಪ್ರತೇಕ)ಗಳ ಸಂಭಾವನೆಯನ್ನು ಪಾವತಿಸಲು ಸರ್ವಾನುಮತದಿಂದ ಅನುಮೋದನೆಯನ್ನು ನೀಡಿತು.<br>ಹಾಗು ಪ್ರತಿ ತಿಂಗಳು ಸಂಸ್ಥೆಯ ಲೆಕ್ಕಪತ್ರಗಳ ಗಣಕೀಕರಣ ಮತ್ತು ನಿರ್ವಹಣೆ ಮಾಡಲು ವಾರ್ಷಿಕವಾಗಿ ರೂ. 42,000/- (ಸೇವಾ ತೆರಿಗೆ ಪ್ರತೇಕ) ಗಳ ಸಂಭಾವನೆಯನ್ನು Pre Audit ಆದ ನಂತರ ಪಾವತಿಸುವಂತೆ ಕ್ರಮ ಕೈಗೊಳ್ಳಲು ಆರ್ಥಿಕ ಸಮಿತಿಯು ಅನುಮೋದನೆಯನ್ನು ನೀಡಿತು.<br>ಚಾರ್ಟೆಡ್ ಅಕೌಟೆಂಟ್ ಇವರು Scope of work ಬಗ್ಗೆ ಕೇಳಿದಾಗ ಮಾನ್ಯ ಕಾರ್ಯದರ್ಶಿಗಳು ಎಲ್ಲಾ ಸ್ವಾಯತ್ತ ಸಂಸ್ಥೆಗಳಿಗೆ ಅನ್ವಯವಾಗುವಂತೆ ಒಂದೆ ತೆರನಾದ ಚಾರ್ಟೆಡ್ ಅಕೌಂಟ್ ನಡೆಸುವ ಬಗ್ಗೆ ಆದೇಶವನ್ನು ಹೊರಡಿಸುವುದಾಗಿ ತಿಳಿಸಿದರು | ಶ್ರೀ ಪಿ.ಕೆ. ಸುಬ್ರಮಣ್ಯಮಂ, ಚಾರ್ಟೆಡ್ ಅಕೌಟೆಂಟ್ ಇವರಿಗೆ ವಾರ್ಷಿಕವಾಗಿ ರೂ. 53,000/- (ಸೇವಾ ತೆರಿಗೆ ಪ್ರತೇಕ)ಗಳ ಸಂಭಾವನೆಯನ್ನು ಪಾವತಿಸುತ್ತಿರುವುದರಿಂದ ಈ ವಿಷಯವನ್ನು ಮುಕ್ತಾಯಗೊಳಿಸಲಾಗಿದೆ. |

(ಸೈಯದ್ ಜೀಯಾವುದ್ದೀನ್)
ಸದಸ್ಯ ಕಾರ್ಯದರ್ಶಿ,
ಹಾಗು ಆರ್ಥಿಕ ಸಲಹೆಗಾರರು,
ರಿಮ್ಸ್ ಆರ್ಥಿಕ ಸಮಿತಿ,
ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,
ರಾಯಚೂರು

(ಡಾ. ತಿಪ್ಪೇರುದ್ರಯ್ಯ. ಸಿ)
ನಿರ್ದೇಶಕರು
ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,
ರಾಯಚೂರು

(ಎನ್. ಶಿವಶೈಲಂ) ಭಾ.ಆ.ಸೇ
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಹಾಗು ಅಧ್ಯಕ್ಷರು, ರಿಮ್ಸ್ ಆರ್ಥಿಕ ಸಮಿತಿ,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ,
ವೈದ್ಯಕೀಯ ಶಿಕ್ಷಣ, ಬೆಂಗಳೂರು

**(ಎನ್. ಶಿವಶೈಲಂ)**
**ಸರ್ಕಾರದ ಪ್ರಧಾನ ಕಾರ್ಯದರ್ಶಿ**
**ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ**

| | | |
|---|---|---|
| ವಿಷಯ ಸೂಚಿ ಸಂಖ್ಯೆ 11 : ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಿಂದ ರಿಮ್ಸ್ ಸಂಸ್ಥೆಯಲ್ಲಿ ವಿಲೀನಗೊಂಡು ಕಾರ್ಯನಿರ್ವಹಿಸುತ್ತಿರುವ ಬೋಧಕ ಸಿಬ್ಬಂದಿಗಳ ಹಕ್ಕಿನಲ್ಲಿರುವ ಗಳಿಕೆ ರಜೆಯನ್ನು ನಗದೀಕರಣ ಮಾಡುವ ಬಗ್ಗೆ ಮಾರ್ಗದರ್ಶನ ನೀಡುವ ಕುರಿತು. | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಿಂದ ರಿಮ್ಸ್ ಸಂಸ್ತೆಯಲ್ಲಿ ವಿಲೀನಗೊಂಡು ಕಾರ್ಯನಿರ್ವಹಿಸುತ್ತಿರುವ ವೈದ್ಯರುಗಳ ಗಳಿಕೆ ರಜೆಗಳನ್ನು, ವಿಲೀನ ಗೊಂಡ ವೈದ್ಯರುಗಳು ಈ ಸಂಸ್ಥೆಯಲ್ಲಿ ಸೇವೆ ಸಲ್ಲಿಸಿದ ಅವಧಿಗೆ ಮಾತ್ರ ನಗದೀಕರಣಗೊಳಿಸಿ ಕೊಡುವಂತೆ ಅನುಮೋದನೆಯನ್ನು ನೀಡಿತು. ಹಾಗು ಸದರಿ ವೈದ್ಯರುಗಳು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಸೇವೆ ಸಲ್ಲಿಸಿದ ಅವಧಿಯಲ್ಲಿ ಗಳಿಸಿದ ಗಳಿಕೆ ರಜೆಗಳನ್ನು ನಗದೀಕರಣಗೊಳಿಸುವ ಬಗ್ಗೆ ಸರ್ಕಾರದ ಪ್ರಧಾನ ಕಾರ್ಯರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಬೆಂಗಳೂರು ಇವರಿಗೆ ಪ್ರಸ್ತಾವನೆಯನ್ನು ಸಲ್ಲಿಸಲು ನಿರ್ದೇಶಕರು, ರಿಮ್ಸ್, ರಾಯಚೂರು ಇವರಿಗೆ ಸೂಚಿಸಲಾಯಿತು. | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಿಂದ ರಿಮ್ಸ್ ಸಂಸ್ಥೆಯಲ್ಲಿ ವಿಲೀನಗೊಂಡು ಕಾರ್ಯನಿರ್ವಹಿಸುತ್ತಿರುವ ವೈದ್ಯರುಗಳ ಗಳಿಕೆ ರಜೆಗಳನ್ನು, ವಿಲೀನ ಗೊಂಡ ವೈದ್ಯರುಗಳು ಈ ಸಂಸ್ಥೆಯಲ್ಲಿ ಸೇವೆ ಸಲ್ಲಿಸಿದ ಅವಧಿಗೆ ಮಾತ್ರ ನಗದೀಕರಣಗೊಳಿಸಿ ಕೊಡುವಂತೆ ಅನುಮೋದನೆಯನ್ನು ನೀಡಿರುವುದರಿಂದ ಈ ವಿಷಯವನ್ನು ಮುಕ್ತಾಯಗೊಳಿಸಲಾಯಿತು. |
| ವಿಷಯ ಸೂಚಿ ಸಂಖ್ಯೆ 12 : ಅಧ್ಯಕ್ಷರ ಅಪ್ಪಣೆ ಮೇರೆಗೆ ಇನ್ನಿತರ ವಿಷಯಗಳು. | –॥– | –॥– |

| | |
|---|---|
| ವಿಷಯ ಸೂಚಿ ಸಂಖ್ಯೆ. – 2 | ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಮಹಾವಿದ್ಯಾಲಯ, ವಿದ್ಯಾರ್ಥಿ, ವಿದ್ಯಾರ್ಥಿನಿಯರ ಹಾಗೂ ಸಿಬ್ಬಂದಿಗಳ ಕಟ್ಟಡಗಳ ವಾರ್ಷಿಕ ನಿರ್ವಹಣೆಯ ಅಂದಾಜು ಪಟ್ಟಿಗೆ ಅನುಮೋದನೆ ನೀಡುವ ಬಗ್ಗೆ. |

ರಿಮ್ಸ್ ಸಂಸ್ಥೆಯ ಅವರಣದಲ್ಲಿರುವ ವೈದ್ಯಕೀಯ ಮಹಾವಿದ್ಯಾಲಯ, ವಿದ್ಯಾರ್ಥಿ, ವಿದ್ಯಾರ್ಥಿನಿಯರ ವಸತಿ ಗೃಹ, ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ವಸತಿ ಗೃಹಗಳನ್ನು ನಿರ್ಮಾಣ ಮಾಡಿ 5 ವರ್ಷಗಳಾಗಿರುವುದರಿಂದ ಹಾಗೂ ಇದುವರೆಗೆ ಸದರಿ ಕಟ್ಟಡಗಳಿಗೆ ಯಾವುದೇ ವಾರ್ಷಿಕ ನಿರ್ವಹಣೆಯ ಕಾಮಗಾರಿಯನ್ನು ಕೈಗೊಂಡಿರದ ಕಾರಣ ಮಹಾವಿದ್ಯಾಲಯದ ಕಟ್ಟಡಗಳನ್ನು ಸುಸ್ಥಿತಿಯಲ್ಲಿಡಲು ವಾರ್ಷಿಕ ನಿರ್ವಹಣೆಯನ್ನು ಕೈಗೊಳ್ಳುವುದು ಅವಶ್ಯವಾಗಿರುವುದರಿಂದ ಕಾರ್ಯನಿರ್ವಾಹಕ ಇಂಜಿನಿಯರರು, ಲೋಕೋಪಯೋಗಿ ಇಲಾಖೆ, ರಾಯಚೂರು ಇವರು ರೂ. 200.00 ಲಕ್ಷಗಳ ಸವಿವರವಾದ ಅಂದಾಜು ಪಟ್ಟಿಯನ್ನು ಧೃಡಿಕರಿಸಿ ಈ ಕಾರ್ಯಲಯಕ್ಕೆ ಸಲ್ಲಿಸಿರುತ್ತಾರೆ

ಕಾರಣ ವೈದ್ಯಕೀಯ ಮಹಾವಿದ್ಯಾಲಯದ ಕಟ್ಟಡಗಳನ್ನು ಸುಸ್ಥಿತಿಯಲ್ಲಿಡುವ ಹಿತದೃಷ್ಟಿಯಿಂದ ಹಾಗೂ ವಿದ್ಯಾರ್ಥಿಗಳು ಹಾಗೂ ಸಿಬ್ಬಂದಿಗಳ ಹಿತದೃಷ್ಟಿಯಿಂದ ಕಟ್ಟಡಗಳ ವಾರ್ಷಿಕ ನಿರ್ವಹಣೆಯ ಅಂದಾಜು ಪಟ್ಟಿ ರೂ. 200.00 ಲಕ್ಷ (ಇನ್ನೂರು ಲಕ್ಷಗಳು ಮಾತ್ರ) ಗಳಿಗೆ ಲೆಕ್ಕಶೀರ್ಷಿಕೆ 4210–03–105–1–02–386 ಯೋಜನೆ ಅಡಿಯಲ್ಲಿ ಕಾಮಗಾರಿಯನ್ನು ಕೈಗೊಳ್ಳಲು ಆರ್ಥಿಕ ಸಮಿತಿ ಸಭೆಯ ಅನುಮೋದನೆ ಕೋರಿ ಸಲ್ಲಿಸಿದೆ.

(ಸೈಯದ್ ಜಿಯಾವುದ್ದೀನ್)
ಸದಸ್ಯ ಕಾರ್ಯದರ್ಶಿ,
ಹಾಗು ಆರ್ಥಿಕ ಸಲಹೆಗಾರರು,
ರಿಮ್ಸ್ ಆರ್ಥಿಕ ಸಮಿತಿ,
ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ.
ರಾಯಚೂರು

(ಡಾ. ತಿಪ್ಪೇರುದ್ರಯ್ಯ. ಸಿ)
ನಿರ್ದೇಶಕರು
ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,
ರಾಯಚೂರು

(ಎನ್. ಶಿವಶೈಲಂ) ಭಾ.ಆ.ಸೇ
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಹಾಗು ಅಧ್ಯಕ್ಷರು, ರಿಮ್ಸ್ ಆರ್ಥಿಕ ಸಮಿತಿ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾ
ವೈದ್ಯಕೀಯ ಶಿಕ್ಷಣ, ಬೆಂಗಳೂರು

(ಎನ್. ಶಿವಶೈಲಂ)
ಸರ್ಕಾರದ ಪ್ರಧಾನ ಕಾರ್ಯದರ್ಶಿ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ

ಸಭೆಯ ತೀರ್ಮಾನ :-

ರಿಮ್ಸ್ ಸಂಸ್ಥೆಯ ಅವರಣದಲ್ಲಿರುವ ವೈದ್ಯಕೀಯ ಮಹಾವಿದ್ಯಾಲಯ, ವಿದ್ಯಾರ್ಥಿ, ವಿದ್ಯಾರ್ಥಿನಿಯರ ವಸತಿ ಗೃಹ, ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ವಸತಿ ಗೃಹಗಳ ವಾರ್ಷಿಕ ನಿರ್ವಹಣೆಯ ಕಾಮಗಾರಿಯನ್ನು ಲೆಕ್ಕಶೀರ್ಷಿಕೆ 4210-03-105-1-02-386 ಯೋಜನೆ ಅಡಿಯಲ್ಲಿ ಕೈಗೊಳ್ಳಲು ಕಾರ್ಯನಿರ್ವಾಹಕ ಇಂಜಿನಿಯರರು, ಲೋಕೋಪಯೋಗಿ ಇಲಾಖೆ, ರಾಯಚೂರು ಇವರು ಸಲ್ಲಿಸಿರುವ ರೂ. 200.00 ಲಕ್ಷಗಳ ಸವಿವರವಾದ ಅಂದಾಜು ಪಟ್ಟಿಯನ್ನು ಆರ್ಥಿಕ ಸಮಿತಿ ಸಭೆಯ ಸರ್ವಾನುಮತದಿಂದ ಅನುಮೋದಿಸಿ, ಆಡಳಿತಾತ್ಮಕ ಅನುಮೋದನೆಯ ಸಂಬಂಧ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲು ಸೂಚಿಸಲಾಯಿತು.

| | |
|---|---|
| ವಿಷಯ ಸೂಚಿ ಸಂಖ್ಯೆ. – 03 | 2014-15ನೇ ಸಾಲಿಗೆ ರಿಮ್ಸ್ ವೈದ್ಯಕೀಯ ಮಹಾವಿದ್ಯಾಲಯ ಹಾಗೂ ರಿಮ್ಸ್ ಬೋಧಕ ಆಸ್ಪತ್ರೆಗೆ ಅವಶ್ಯವಿರುವ ಲ್ಯಾಬ್ ಕೆಮಿಕಲ್ಸ್, ರಿಏಜೆಂಟ್ಸ್ ಮತ್ತು ಕಿಟ್‌ಗಳನ್ನು ಖರೀದಿಸಲು ಕೆ.ಟಿ.ಪಿ.ಪಿ ಕಾಯ್ದೆಯನ್ವಯ ಟೆಂಡರ್ ಆಹ್ವಾನಿಸಲು ಅನುಮತಿ ನೀಡುವ ಕುರಿತು. |

Tender

ರಿಮ್ಸ್ ವೈದ್ಯಕೀಯ ಮಹಾವಿದ್ಯಾಲಯ ಹಾಗೂ ರಿಮ್ಸ್ ಬೋಧಕ ಆಸ್ಪತ್ರೆಗೆ ಅವಶ್ಯವಿರುವ ಲ್ಯಾಬ್ ಕೆಮಿಕಲ್ಸ್, ರಿಏಜೆಂಟ್ಸ್ ಮತ್ತು ಕಿಟ್‌ಗಳನ್ನು ರೋಗಿಗಳಿಗೆ ಖರೀದಿಸಿ ಪೂರೈಸಬೇಕಾಗಿದ್ದು, ಬೇಡಿಕೆ ಪತ್ರವನ್ನು ಲಗತ್ತಿಸಿದೆ. ಸದರಿ ಲ್ಯಾಬ್ ಕೆಮಿಕಲ್ಸ್, ರಿಏಜೆಂಟ್ಸ್ ಮತ್ತು ಕಿಟ್‌ಗಳು ರೋಗಿಗಳಿಗೆ ಚಿಕಿತ್ಸೆ ನಿಮಿತ್ತ ವಿವಿಧ ಪ್ರಾಯೋಗಿಕ ಪರೀಕ್ಷೆಗಳನ್ನು ಜರುಗಿಸಲು ಮತ್ತು ವಿವಿಧ ವಿಭಾಗಗಳಲ್ಲಿ ವಿದ್ಯಾರ್ಥಿಗಳು ಪ್ರಾಯೋಗಿಕ ಪರೀಕ್ಷೆ ಜರುಗಿಸಲು ಲ್ಯಾಬ್ ಕೆಮಿಕಲ್ಸ್, ರಿಜೆಂಟ್ಸ್ ಮತ್ತು ಕಿಟ್‌ಗಳ ಅವಶ್ಯಕತೆ ಇರುತ್ತದೆ.

ಒಟ್ಟು 210 ಲ್ಯಾಬ್ ಕೆಮಿಕಲ್ಸ್ ರಿಜೆಂಟ್ಸ್‌ಗೆ ಅಂದಾಜು ರೂ. 15,64,565/- ಮತ್ತು ಒಟ್ಟು 166 ಗ್ಲಾಸ್‌ವೇರ್ಸ್, ಪ್ರಾಯೋಗಿಕ ಸಲಕರಣೆಗಳು ಹಾಗೂ ಕಿಟ್‌ಗಳನ್ನು ಖರೀದಿಸಲು ರೂ.38,74,922/- ಗಳು ಹೀಗೆ ಒಟ್ಟು ಅಂದಾಜು ರೂ. 54,39,487/- ವೆಚ್ಚವಾಗುತ್ತಿದ್ದು, ಪ್ರತಿ ಐಟಂನ ಅಂದಾಜು ಬೆಲೆಯನ್ನು ಬೇಡಿಕೆ ಪತ್ರದಲ್ಲಿ ವಿವರವಾಗಿ ನಮೂದಿಸಿದೆ.

ಕಾರಣಈ ಸಂಸ್ಥೆಗೆ ಅವಶ್ಯವಿರುವ ವಿವಿಧ ಲ್ಯಾಬ್ ಕೆಮಿಕಲ್ಸ್, ರಿಜೆಂಟ್ಸ್ ಮತ್ತು ಕಿಟ್‌ಗಳನ್ನು ಕೆ.ಟಿ.ಪಿ.ಪಿ ನಿಯಾಮಾವಳಿಯನ್ವಯ 2014-15ನೇ ಸಾಲಿಗಾಗಿ ಟೆಂಡರ್ ಆಹ್ವಾನಿಸಲು ಆರ್ಥಿಕ ಸಮಿತಿ ಸಭೆಯ ಅನುಮೋದನೆ ಕೋರಿ ಸಲ್ಲಿಸಿದೆ.

ಸಭೆಯ ತೀರ್ಮಾನ :-

ರಿಮ್ಸ್ ವೈದ್ಯಕೀಯ ಮಹಾವಿದ್ಯಾಲಯ ಹಾಗೂ ರಿಮ್ಸ್ ಬೋಧಕ ಆಸ್ಪತ್ರೆಗೆ ಅವಶ್ಯವಿರುವ ಒಟ್ಟು 210 ಲ್ಯಾಬ್ ಕೆಮಿಕಲ್ಸ್ ರಿಜೆಂಟ್ಸ್‌ಗೆ ಅಂದಾಜು ರೂ. 15,64,565/- ಮತ್ತು ಒಟ್ಟು 166 ಗ್ಲಾಸ್‌ವೇರ್ಸ್, ಪ್ರಾಯೋಗಿಕ ಸಲಕರಣೆಗಳು ಹಾಗೂ ಕಿಟ್‌ಗಳನ್ನು ಖರೀದಿಸಲು ರೂ.38,74,922/- ಗಳು ಹೀಗೆ ಒಟ್ಟು ಅಂದಾಜು ರೂ. 54,39,487/- ವೆಚ್ಚದಲ್ಲಿ ನಿಯಮಾನುಸಾರ ಕೆ.ಟಿ.ಪಿ.ಪಿ ನಿಯಮಾವಳಿಯನ್ವಯ 2014-15ನೇ ಸಾಲಿಗಾಗಿ ಟೆಂಡರ್ ಆಹ್ವಾನಿಸಲು ಆರ್ಥಿಕ ಸಮಿತಿ ಸಭೆಯು ಸರ್ವಾನುಮತದಿಂದ ಅನುಮೋದನೆ ನೀಡಿತು.

(ಸೈಯದ್ ಜೀಯಾವುದ್ದೀನ್)
ಸದಸ್ಯ ಕಾರ್ಯದರ್ಶಿ,
ಹಾಗು ಆರ್ಥಿಕ ಸಲಹೆಗಾರರು,
ರಿಮ್ಸ್ ಆರ್ಥಿಕ ಸಮಿತಿ,
ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,
(ರಾಯಚೂರು)

(ಡಾ. ತಿಪ್ಪೇರುದ್ರಯ್ಯ. ಸಿ)
ನಿರ್ದೇಶಕರು
ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,
ರಾಯಚೂರು

N. Sivasailam
(ಎನ್. ಶಿವಶೈಲಂ) ಭಾ.ಆ.ಸೇ
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಹಾಗು ಅಧ್ಯಕ್ಷರು, ರಿಮ್ಸ್ ಆರ್ಥಿಕ ಸಮಿತಿ,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
ವೈದ್ಯಕೀಯ ಶಿಕ್ಷಣ, ಬೆಂಗಳೂರು

(ಎನ್. ಶಿವಶೈಲಂ)
ಸರ್ಕಾರದ ಪ್ರಧಾನ ಕಾರ್ಯದರ್ಶಿ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ

| | |
|---|---|
| ವಿಷಯ ಸೂಚಿ ಸಂಖ್ಯೆ – 04 | ರಿಮ್ಸ್ ವೈದ್ಯಕೀಯ ಮಹಾವಿದ್ಯಾಲಯ ಹಾಗೂ ರಿಮ್ಸ್ ಬೋಧಕ ಆಸ್ಪತ್ರೆಗೆ ಅವಶ್ಯವಿರುವ 80 ಸ್ವಚ್ಚತಾ ಕಾರ್ಯಕರ್ತರು ಸೇವೆಯನ್ನು ನಿಯಮಾನುಸಾರ ಹೊರಗುತ್ತಿಗೆಯ ಮುಖಾಂತರ ಪಡೆಯಲು ಅನುಮತಿ ನೀಡುವ ಕುರಿತು. |

Tender

ರಿಮ್ಸ್ ವೈದ್ಯಕೀಯ ಮಹಾವಿದ್ಯಾಲಯಕ್ಕೆ 50 ಸ್ವಚ್ಚತಾ ಕಾರ್ಯಕರ್ತರ ಸಿಬ್ಬಂದಿಯನ್ನು ಮತ್ತು ರಿಮ್ಸ್ ಬೋಧಕ ಆಸ್ಪತ್ರೆಗೆ 30 ಸ್ವಚ್ಚತಾ ಕಾರ್ಯಕರ್ತರ ಸಿಬ್ಬಂದಿ ಸೇವೆಯನ್ನು ನಿಯಮಾನುಸಾರ ಟೆಂಡರ್ ಆಹ್ವಾನಿಸಿ ಹೊರಗುತ್ತಿಗೆ ಮೂಲಕ ಗುತ್ತಿಗೆಯನ್ನು ನಿಗದಿ ಪಡಿಸಿ ಸೇವೆಯನ್ನು ಪಡೆಯಲಾಗಿದೆ. ಸದರಿಯವರ ಒಂದು ವರ್ಷದ ಗುತ್ತಿಗೆ ಅವಧಿಯು ಪೂರ್ಣಗೊಂಡಿದ್ದು, ಹೊಸ ಟೆಂಡರ್ ಪ್ರಕ್ರಿಯೆಯನ್ನು ಪ್ರಾರಂಭಿಸಬೇಕಾಗಿದೆ. ರೋಗಿಗಳ ಹಿತದೃಷ್ಟಿಯಿಂದ ಯಾವುದೇ ರೀತಿ ತೊಂದರೆಯಾಗದಂತೆ, ಟೆಂಡರ್ ಷರತ್ತಿನ್ವಯ ಮೂರು ತಿಂಗಳ ಅವಧಿಗೆ ಅಂಗೀಕೃತ ದರದಲ್ಲಿಯೇ ಗುತ್ತಿಗೆ ಅವಧಿಯನ್ನು ಹೊಸ ಟೆಂಡರ್ ಪ್ರಕ್ರಿಯೆ ಪೂರ್ಣಗೊಳ್ಳುವ ಅವಧಿ ಅಥವಾ ಮೂರು ತಿಂಗಳ ಅವಧಿ ಇವೆರಡರಲ್ಲಿ ಯಾವುದು ಮೊದಲೋ ಆ ಅವಧಿಗೆ ಗುತ್ತಿಗೆಯನ್ನು ವಿಸ್ತರಿಸಿದೆ.

ಕಾರ್ಮಿಕ ಇಲಾಖೆಯು 2014–15ನೇ ಸಾಲಿಗಾಗಿ ನಿಗದಿಪಡಿಸಿರುವ ಕನಿಷ್ಠ ವೇತನ ಕಾಯ್ದೆಯನ್ವಯ ಪ್ರತಿ ಸಿಬ್ಬಂದಿಗೆ ಪ್ರತಿ ತಿಂಗಳಿಗೆ ರೂ. 7,248.45 ಗಳನ್ನು ಸಂದಾಯ ಮಾಡಬೇಕಾಗಿದ್ದು, ಒಟ್ಟು 80 ಸ್ವಚ್ಚತಾ ಸಿಬ್ಬದಿಂಗೆ ಪ್ರತಿ ತಿಂಗಳಿಗೆ ರೂ. 5,79,876/– ರಂತೆ ಒಂದು ವರ್ಷಕ್ಕೆ ರೂ. 69,58,511/– ವೆಚ್ಚವಾಗುತ್ತದೆ. (ಟೆಂಡರ್‌ದಾರರ ಸೇವಾ ತೆರಿಗೆಯನ್ನು ಹೊರತು ಪಡಿಸಿ). ಕಾರ್ಮಿಕ ಕಾಯ್ದೆಯ ಕನಿಷ್ಠ ವೇತನದ ವಿವರವಾದ ಮಾಹಿತಿಯನ್ನು ನಮೂದಿಸಿ ಸಲ್ಲಿಸಲಾಗಿದೆ.

ಕಾರಣ ವೈದ್ಯಕೀಯ ಮಹಾವಿದ್ಯಾಲಯಕ್ಕೆ 50 ಸ್ವಚ್ಚತಾ ಕಾರ್ಯಕರ್ತ ಸಿಬ್ಬಂದಿಯನ್ನು ಹಾಗೂ ರಿಮ್ಸ್ ಬೋಧಕ ಆಸ್ಪತ್ರೆಗೆ 30 ಸ್ವಚ್ಚತಾ ಕಾರ್ಯಕರ್ತ ಸಿಬ್ಬಂದಿಯನ್ನು ಸೇರಿ ಒಟ್ಟು 80 ಸ್ವಚ್ಚತಾ ಕಾರ್ಯಕರ್ತ ಸಿಬ್ಬಂದಿಯವರ ಸೇವೆಯನ್ನು ಪಡೆಯಲು ಕೆ.ಟಿ.ಪಿ.ಪಿ ಕಾಯ್ದೆನ್ವಯ ಹೊಸದಾಗಿ ಟೆಂಡರ್ ಆಹ್ವಾನಿಸಲು ಆರ್ಥಿಕ ಸಮಿತಿ ಸಭೆಯ ಅನುಮೋದನೆ ಕೋರಿ ಸಲ್ಲಿಸಿದೆ.

ಸಭೆಯ ತೀರ್ಮಾನ :–

ವೈದ್ಯಕೀಯ ಮಹಾವಿದ್ಯಾಲಯ ಹಾಗೂ ರಿಮ್ಸ್ ಬೋಧಕ ಆಸ್ಪತ್ರೆಗೆ ಅವಶ್ಯವಿರುವ ಸ್ವಚ್ಚತಾ ಕಾರ್ಯಕರ್ತ ಸಿಬ್ಬಂದಿಯವರ ಸೇವೆಯನ್ನು ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಸ್ವಚ್ಚತಾ ಕಾರ್ಯದ ಸೇವೆ ನೀಡುತ್ತಿರುವ ಮಾಧ್ಯರಿಯನ್ನು ಅಳವಡಿಸಿಕೊಂಡು ನಿಯಮಾನುಸಾರ ಕೆ.ಟಿ.ಪಿ.ಪಿ ಕಾಯ್ದೆನ್ವಯ ಟೆಂಡರ್ ಆಹ್ವಾನಿಸಲು ಆರ್ಥಿಕ ಸಮಿತಿ ಸಭೆಯು ಸರ್ವಾನುಮತದಿಂದ ಅನುಮೋದನೆ ನೀಡಿತು.

(ಸೈಯದ್ ಜೀಯಾವುದ್ದೀನ್)
ಸದಸ್ಯ ಕಾರ್ಯದರ್ಶಿ,
ಹಾಗು ಆರ್ಥಿಕ ಸಲಹೆಗಾರರು,
ರಿಮ್ಸ್ ಆರ್ಥಿಕ ಸಮಿತಿ,
ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ.
(ರಾಯಚೂರು)

(ಡಾ. ತಿಪ್ಪೇರುದ್ರಯ್ಯ. ಸಿ)
ನಿರ್ದೇಶಕರು
ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,
ರಾಯಚೂರು

(ಎಸ್. ಶಿವಶೈಲಂ) ಭಾ.ಆ.ಸೇ
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಹಾಗು ಅಧ್ಯಕ್ಷರು, ರಿಮ್ಸ್ ಆರ್ಥಿಕ ಸಮಿತಿ,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
ವೈದ್ಯಕೀಯ ಶಿಕ್ಷಣ, ಬೆಂಗಳೂರು

(ಎಸ್. ಶಿವಶೈಲಂ)
ಸರ್ಕಾರದ ಪ್ರಧಾನ ಕಾರ್ಯದರ್ಶಿ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ

| ವಿಷಯ ಸೂಚಿ<br>ಸಂಖ್ಯೆ. – 05 | ರಿಮ್ಸ್ ವೈದ್ಯಕೀಯ ಮಹಾವಿದ್ಯಾಲಯ ಹಾಗೂ ರಿಮ್ಸ್ ಬೋಧಕ ಆಸ್ಪತ್ರೆಗೆ ಅವಶ್ಯವಿರುವ 50 ಭದ್ರತಾ ಸಿಬ್ಬಂದಿಯವರ ಸೇವೆಯನ್ನು ನಿಯಮಾನುಸಾರ ಹೊರಗುತ್ತಿಗೆಯ ಮುಖಾಂತರ ಪಡೆಯಲು ಅನುಮತಿ ನೀಡುವ ಕುರಿತು. |
|---|---|

Tender

ರಿಮ್ಸ್ ವೈದ್ಯಕೀಯ ಮಹಾವಿದ್ಯಾಲಯ ಮತ್ತು ರಿಮ್ಸ್ ಬೋಧಕ ಆಸ್ಪತ್ರೆಗೆ 50 ಭದ್ರತಾ ಸಿಬ್ಬಂದಿ ಸೇವೆಗಾಗಿ ಸರ್ಕಾರದ ನಿರ್ದೇಶನದಂತೆ, ಗೃಹ ರಕ್ಷಕ ಸಿಬ್ಬಂದಿಯವರ ಸೇವೆಯನ್ನು ಪಡೆಯಲಾಗಿತ್ತು. ಆದರೆ ಗೃಹ ರಕ್ಷಕ ಸಿಬ್ಬಂದಿಯವರ ಸೇವೆಯನ್ನು ಪಡೆದಾಗಿನಿಂದಲೂ ಸೇವೆ ತೃಪ್ತಿಕರವಾಗಿರುವುದಿಲ್ಲ. ಕಾಲೇಜು ಮತ್ತು ಆಸ್ಪತ್ರೆಯ ಅವರಣದಲ್ಲಿ ಅನೇಕ ಕಳ್ಳತನದ ಪ್ರಕರಣಗಳು ಮತ್ತು ವೈದ್ಯರ ಮೇಲೆ ಹಲ್ಲೆಯಂತಹ ಪ್ರಕರಣಗಳು ಗೃಹರಕ್ಷಕ ದಳದ ಸಿಬ್ಬಂದಿ ನಿರ್ಲಕ್ಷ್ಯತನದಿಂದ ಮೇಲಿಂದ ಮೇಲೆ ಮರುಕಳಿಸಿರುತ್ತವೆ. ಭದ್ರತೆಯ ನಿಮಿತ್ತ ಯಾವುದೇ ಜವಾಬ್ದಾರಿಯನ್ನು ಗೃಹ ರಕ್ಷಕ ಸಿಬ್ಬಂದಿಯವರು ಸಮರ್ಪಕವಾಗಿ ನಿರ್ವಹಿಸುತ್ತಿಲ್ಲ. ಮತ್ತು ಬೇಜಾಬ್ದಾರಿಯಿಂದ ವರ್ತಿಸುತ್ತಿದ್ದಾರೆ. ತುರ್ತು ಪರಿಸ್ಥಿತಿ ಸಂಧರ್ಭಗಳಲ್ಲಿ ಗೃಹ ರಕ್ಷಕ ಸಿಬ್ಬಂದಿಯವರು ಬೇರೆಡೆಗೆ ಅನ್ಯ ಕರ್ತವ್ಯದ ಮೇಲೆ ಹಾಗೂ ಚುನಾವಣೆ ಸಂಧರ್ಭಗಳಲ್ಲಿ ಹಾಗೂ ಗಣ್ಯವ್ಯಕ್ತಿಗಳ ಪ್ರವಾಸ ವಿದ್ದಲ್ಲಿ ನಿಯೋಜಿಸುವುದರಿಂದ, ಸಂಸ್ಥೆ ಹಾಗೂ ಬೋದಕ ಆಸ್ಪತ್ರೆಯಲ್ಲಿ ಭದ್ರತೆ ಇಲ್ಲದಂತಾಗುತ್ತದೆ. ಅದುದರಿಂದ ಗೃಹ ರಕ್ಷಕ ಸಿಬ್ಬಂದಿಯವರ ಸೇವೆಯನ್ನು ರದ್ದುಗೊಳಿಸಿ, ಭದ್ರತಾ ಸಿಬ್ಬಂದಿ ಸೇವೆಗಾಗಿ ಹೊರಗುತ್ತಿಗೆ ಮೂಲಕ 50 ಭದ್ರತಾ ಸಿಬ್ಬಂದಿಯವರ ಸೇವೆಯನ್ನು ಪಡೆಯುವುದು ಅತಿ ಅವಶ್ಯಕವಾಗಿರುತ್ತದೆ.

ಕಾರ್ಮಿಕ ಇಲಾಖೆಯು ನಿಗದಿಪಡಿಸಿರುವ ಕನಿಷ್ಟ ವೇತನ ಕಾಯ್ದೆಯನ್ವಯ ಪ್ರತಿ ಭದ್ರತಾ ಸಿಬ್ಬಂದಿಗೆ ಪ್ರತಿ ಸಿಬ್ಬಂದಿಗೆ ರೂ. 9887.30 ರಂತೆ 50 ಭದ್ರತಾ ಸಿಬ್ಬಂದಿಗೆ ಪ್ರತಿ ತಿಂಗಳಿಗೆ ರೂ.4,94,365/– ಹಾಗೂ ವರ್ಷಕ್ಕೆ ರೂ. 59,32,381/– ಗಳ ವೆಚ್ಚವಾಗುತ್ತದೆ. (ಟೆಂಡರ್‌ದಾರರ ಸೇವಾ ತೆರಿಗೆಯನ್ನು ಹೊರತು ಪಡಿಸಿ). ಕಾರ್ಮಿಕ ಕಾಯ್ದೆಯ ಕನಿಷ್ಟ ವೇತನದ ವಿವರವಾದ ಮಾಹಿತಿಯನ್ನು ನಮೂದಿಸಿ ಸಲ್ಲಿಸಲಾಗಿದೆ.

ಕಾರಣ ವೈದ್ಯಕೀಯ ಮಹಾವಿದ್ಯಾಲಯ ಹಾಗೂ ರಿಮ್ಸ್ ಬೋಧಕ ಆಸ್ಪತ್ರೆಗೆ ಅವಶ್ಯವಿರುವ 50 ಭದ್ರತಾ ಸಿಬ್ಬಂದಿಗಳ ಸೇವೆಯನ್ನು ಹೊರಗುತ್ತಿಗೆ ಮೂಲಕ ನೇಮಕ ಮಾಡಿಕೊಳ್ಳಲು ಕೆ.ಟಿ.ಪಿ.ಪಿ ಕಾಯ್ದೆನ್ವಯ ಹೊಸದಾಗಿ ಟೆಂಡರ್ ಆಹ್ವಾನಿಸಲು ಆರ್ಥಿಕ ಸಮಿತಿ ಸಭೆಯ ಅನುಮೋದನೆ ಕೋರಿ ಸಲ್ಲಿಸಿದೆ.

ಸಭೆಯ ತೀರ್ಮಾನ :–

ಸದ್ಯ ಭದ್ರತೆಯನ್ನು ಒದಗಿಸುತ್ತಿರುವ ಗೃಹ ರಕ್ಷಕ ಸಿಬ್ಬಂದಿಗಳ ಸೇವೆಯು ತೃಪ್ತಿಕವಾಗಿರದ ಕುರಿತು, ಜಿಲ್ಲಾ ಗೃಹ ರಕ್ಷಕ ಅಧಿಕಾರಿಗಳು ಹಾಗೂ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಸಭೆಯನ್ನು ಜರುಗಿಸಿ, ಚರ್ಚಿಸಿ ಮುಂದಿನ ಕ್ರಮ ಕೈಗೊಳ್ಳಲು ಸೂಚಿಸಲಾಯಿತು. ಹಾಗೂ ಸಂಸ್ಥೆಯ ವತಿಯಿಂದ ಭದ್ರತಾ ಸಿಬ್ಬಂದಿಗಳ ಮೇಲ್ವಿಚಾರಣೆಗಾಗಿ ಒರ್ವ ಭದ್ರತಾ ಅಧಿಕಾರಿ ಹಾಗೂ ಇಬ್ಬರು ಸಹಾಯಕ ಭದ್ರತಾ ಅಧಿಕಾರಿಗಳನ್ನು ನೇಮಿಸಿಕೊಳ್ಳುವಂತೆ ನಿರ್ದೇಶಕರು, ರಿಮ್ಸ್, ರಾಯಚೂರು ಇವರಿಗೆ ಸೂಚಿಸಲಾಯಿತು.

(ಸೈಯದ್ ಜಿಯಾವುದ್ದೀನ್)
ಸದಸ್ಯ ಕಾರ್ಯದರ್ಶಿ,
ಹಾಗು ಆರ್ಥಿಕ ಸಲಹೆಗಾರರು,
ರಿಮ್ಸ್ ಆರ್ಥಿಕ ಸಮಿತಿ,
ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,
ರಾಯಚೂರು.

(ಡಾ. ತಿಪ್ಪೇರುದ್ರಯ್ಯ. ಸಿ)
ನಿರ್ದೇಶಕರು
ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,
ರಾಯಚೂರು

(ಎನ್. ಶಿವಶೈಲಂ) ಭಾ.ಆ.ಸೇ
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಹಾಗು ಅಧ್ಯಕ್ಷರು, ರಿಮ್ಸ್ ಆರ್ಥಿಕ ಸಮಿತಿ,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ,
ವೈದ್ಯಕೀಯ ಶಿಕ್ಷಣ, ಬೆಂಗಳೂರು

(ಎನ್. ಶಿವಶೈಲಂ)
ಸರ್ಕಾರದ ಪ್ರಧಾನ ಕಾರ್ಯದರ್ಶಿ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ

| ವಿಷಯ ಸೂಚಿ ಸಂಖ್ಯೆ. – 06 | ರಿಮ್ಸ್ ನೂತನ ಬೋಧಕ ಆಸ್ಪತ್ರೆಗೆ "Hospital Management Software System" ನಿರ್ವಹಣೆಗಾಗಿ ಟೆಂಡರ್ ಕರೆಯಲು ಅನುಮತಿ ನೀಡುವ ಬಗ್ಗೆ |
|---|---|

ರಿಮ್ಸ್ ಬೋಧಕ ಆಸ್ಪತ್ರೆಯಲ್ಲಿ ದಾಖಲಾಗುವ ಹೊರ ಹಾಗೂ ಒಳ ರೋಗಿಗಳ ವಿವರಗಳನ್ನು ಗಣಕ ಯಂತ್ರದಲ್ಲಿ ನಮೂದಿಸಲು ಭಾರತೀಯ ವೈದ್ಯಕೀಯ ಮಂಡಳಿಯ ನಿಯಮದಂತೆ "Hospital Management Software System" ತಂತ್ರಾಂಶವನ್ನು 2007 ರಲ್ಲಿ ಖರೀದಿಸಿ ಅಳವಡಿಸಲಾಗಿದ್ದು, ಇದರ ನಿರ್ವಹಣೆಯನ್ನು ಈ ಹಿಂದೆ ಟೆಂಡರ್ ಮೂಲಕ ಮೆ॥ ಆಕ್ಸ್‌ಸ್ ಇನ್ಫೋಟೆಕ್ನಾಲಜಿಸ್, ಬೆಂಗಳೂರು ಇವರಿಗೆ ಗುತ್ತಿಗೆಯನ್ನು ನೀಡಲಾಗಿದ್ದು, ಈ ಗುತ್ತಿಗೆಯ ಅವಧಿಯು ಪೂರ್ಣಗೊಂಡಿರುತ್ತದೆ. ಕಾರಣ ಟೆಂಡರ್ ಕರೆದು ಗುತ್ತಿಗೆಯನ್ನು ನಿಗದಿಪಡಿಸಬೇಕಾಗುತ್ತದೆ.

ಸದ್ಯ ಮೆ॥ ಆಕ್ಸ್‌ಸ್ ಇನ್ಫೋಟೆಕ್ನಾಲಜಿಸ್, ಬೆಂಗಳೂರು ಇವರಿಗೆ ಟೆಂಡರ್‌ನಲ್ಲಿ ಅಂಗೀಕೃತ ಗೊಂಡ ಪ್ರತಿ ತಿಂಗಳ ಮೊತ್ತ ರೂ. 1,83,000/- ದಂತೆ ಸಂದಾಯ ಮಾಡುತ್ತಿದ್ದು, ಒಂದು ವರ್ಷಕ್ಕೆ ರೂ. 21,96,000/- ಗಳು ವೆಚ್ಚವಾಗುತ್ತಿದೆ.

ಸದರಿ ತಂತ್ರಾಂಶದ ನಿರ್ವಹಣೆಯು ಒಳ ಹಾಗೂ ಹೊರ ರೋಗಿಗಳ ದಾಖಲೆಗಳನ್ನು ದಾಖಲಿಸಲು, ಉಗ್ರಾಣದಲ್ಲಿ ಲಭ್ಯವಿರುವ ಔಷಧಗಳ ದಾಸ್ತಾನನ್ನು ದಾಖಲಿಸಲು, ಮತ್ತು ಎಲ್ಲಾ ವಿಭಾಗಗಳ ಪ್ರಯೋಗ ಶಾಲೆಯ ವರದಿಯನ್ನು ನಿರ್ವಹಿಸುವಲ್ಲಿ ಅತಿ ಅವಶ್ಯವಾಗಿರುವುದರಿಂದ, ಸದರಿ ತಂತ್ರಾಂಶವನ್ನು ನಿರ್ವಹಣೆಯನ್ನು ಕೈಗೊಳ್ಳಲು ಕೆ.ಟಿ.ಪಿ.ಪಿ ನಿಯಾಮಾವಳಿಯನ್ವಯ ಹೊಸದಾಗಿ ಟೆಂಡರ್ ಆಹ್ವಾನಿಸಲು ಆರ್ಥಿಕ ಸಮಿತಿ ಸಭೆಯ ಅನುಮೋದನೆ ಕೋರಿ ಸಲ್ಲಿಸಿದೆ.

ಸಭೆಯ ತೀರ್ಮಾನ :-

ರಿಮ್ಸ್ ಬೋಧಕ ಆಸ್ಪತ್ರೆಯಲ್ಲಿ ದಾಖಲಾಗುವ ಹೊರ ಹಾಗೂ ಒಳ ರೋಗಿಗಳ **(Hospital Management Software System)** ನಿರ್ವಹಣೆಯ ದಾಖಲೆಗಳನ್ನು ದಾಖಲಿಸಲು, ಉಗ್ರಾಣದಲ್ಲಿ ಲಭ್ಯವಿರುವ ಔಷಧಗಳ ದಾಸ್ತಾನನ್ನು ದಾಖಲಿಸಲು, ಮತ್ತು ಎಲ್ಲಾ ವಿಭಾಗಗಳ ಪ್ರಯೋಗ ಶಾಲೆಯ ವರದಿಯನ್ನು ನಿರ್ವಹಿಸಲು ಅವಶ್ಯವಿರುವ ಗಣಕ ಯಂತ್ರ ತಂತ್ರಾಂಶದ ನಿರ್ವಹಣೆಯನ್ನು ಕೈಗೊಳ್ಳಲು ನಿಮಾನ್ಸ್ ಆಸ್ಪತ್ರೆಯಲ್ಲಿ ಅಳವಡಿಸಿಕೊಂಡಿರುವ **NIC Software** ನ್ನು ನಿಯಮಾನುಸಾರ ಅಳವಡಿಸಿಕೊಳ್ಳಲು ಆರ್ಥಿಕ ಸಮಿತಿ ಸಭೆಯು ಸರ್ವಾನುಮತದಿಂದ ಅನುಮೋದನೆ ನೀಡಿತು. ಹಾಗೂ ಪ್ರತಿ ವೈದ್ಯರಿಗೆ ಕಂಪ್ಯೂಟರ್‌ಗಳನ್ನು ಪೂರೈಸಿ ಆಸ್ಪತ್ರೆಗೆ ಬರುವ ಹೊರ ಮತ್ತು ಒಳ ರೋಗಿಗಳ ಚಿಕಿತ್ಸೆಗಾಗಿ ನೊಂಧಣೀ ಮಾಡಲು ಟೋಕನ್ ಪದ್ದತಿಯನ್ನು ಅಳವಡಿಸಿಕೊಳ್ಳುವಂತೆ, ಮತ್ತು ವೈದ್ಯರು ಸೂಚಿಸುವ ಔಷಧಗಳನ್ನು **(Prescription)** ರೋಗಿಗಳ ಹಿತದೃಷ್ಟಿಯಿಂದ ಆನ್‌ಲೈನ್ ಪದ್ದತಿಯಲ್ಲಿ ನಿರ್ವಹಿಸುವಂತೆ ಸೂಚಿಸಲಾಯಿತು. ಹಾಗೂ ನೂತನ ಬೋಧಕ ಆಸ್ಪತ್ರೆಗೆ **NIC Software** ನ್ನು ಅಳವಡಿಸಿದ ನಂತರ ಮೆ॥ ಆಕ್ಸ್‌ಸ್ ಇನ್ಫೋಟೆಕ್ ಇವರ ಸೇವೆಯನ್ನು ಸ್ಥಗಿತಗೊಳಿಸಲು ಸೂಚಿಸಲಾಯಿತು.

(ಸೈಯದ್ ಜೀಯಾವುದ್ದೀನ್)
ಸದಸ್ಯ ಕಾರ್ಯದರ್ಶಿ,
ಹಾಗು ಆರ್ಥಿಕ ಸಲಹೆಗಾರರು,
ರಿಮ್ಸ್ ಆರ್ಥಿಕ ಸಮಿತಿ,
ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,
ರಾಯಚೂರು

(ಡಾ. ತಿಪ್ಪೇರುದ್ರಯ್ಯ. ಸಿ)
ನಿರ್ದೇಶಕರು
ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,
ರಾಯಚೂರು

(ಎನ್. ಶಿವಶೈಲಂ) ಭಾ.ಆ.ಸೇ
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಹಾಗು ಅಧ್ಯಕ್ಷರು, ರಿಮ್ಸ್ ಆರ್ಥಿಕ ಸಮಿತಿ,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ,
ವೈದ್ಯಕೀಯ ಶಿಕ್ಷಣ, ಬೆಂಗಳೂರು

(ಎನ್. ಶಿವಶೈಲಂ)
ಸರ್ಕಾರದ ಪ್ರಧಾನ ಕಾರ್ಯದರ್ಶಿ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ

| ವಿಷಯ ಸೂಚಿ ಸಂಖ್ಯೆ. – 07 | ರಿಮ್ಸ್ ಬೋಧಕ ಆಸ್ಪತ್ರೆಗೆ 2014-15ನೇ ಸಾಲಿಗೆ ಅವಶ್ಯವಿರುವ ಆಹಾರ ಪದಾರ್ಥ ಮತ್ತು ಅವಶ್ಯ ವಸ್ತುಗಳನ್ನು ಖರೀದಿಸಲು ನಿಯಮಾನುಸಾರ ಟೆಂಡರ್ ಆಹ್ವಾನಿಸಲು ಅನುಮತಿ ನೀಡುವ ಕುರಿತು. |
|---|---|

Tender

ರಿಮ್ಸ್ ನೂತನ ಬೋಧಕ ಆಸ್ಪತ್ರೆಗೆ 2014-15ನೇ ಸಾಲಿಗೆ ಅವಶ್ಯವಿರುವ ಪಥ್ಯಾಹಾರ ಮತ್ತು ಆಸ್ಪತ್ರೆಯ ಅವಶ್ಯಕ ವಸ್ತುಗಳನ್ನು ಪೂರೈಸಲು ಈ ಹಿಂದೆ ಅನುಮೋದನೆ ಪಡೆದು ಟೆಂಡರ್‌ನ್ನು ಆಹ್ವಾನಿಸಿ ಒಂದು ವರ್ಷದ ಅವಧಿಗೆ ಗುತ್ತಿಗೆಯನ್ನು ನಿಗದಿಪಡಿಸಲಾಗಿದ್ದು, ಸದರಿಯವರ ಒಂದು ವರ್ಷದ ಗುತ್ತಿಗೆ ಅವಧಿಯು ಪೂರ್ಣಗೊಂಡಿರುವುದರಿಂದ, ರೋಗಿಗಳು ಹಿತದೃಷ್ಟಿಯಿಂದ ಯಾವುದೇ ರೀತಿ ತೊಂದರೆಯಾಗದಂತೆ, ಟೆಂಡರ್ ಷರತ್ತಿನ್ವಯ ಮೂರು ತಿಂಗಳ ಅವಧಿಗೆ ಅಂಗೀಕೃತ ದರದಲ್ಲಿಯೇ ಗುತ್ತಿಗೆ ಅವಧಿಯನ್ನು ಹೊಸ ಟೆಂಡರ್ ಪ್ರಕ್ರಿಯೆ ಪೂರ್ಣಗೊಳ್ಳುವ ಅವಧಿ ಅಥವಾ ಮೂರು ತಿಂಗಳ ಅವಧಿ ಇವೆರಡರಲ್ಲಿ ಯಾವುದು ಮೊದಲೋ ಆ ಅವಧಿಗೆ ಗುತ್ತಿಗೆಯನ್ನು ವಿಸ್ತಿರಿಸಿದೆ. ಸದರಿ ಆಹಾರ ಪದಾರ್ಥ ಮತ್ತು ಅವಶ್ಯ ವಸ್ತುಗಳಿಗಾಗಿ ವಾರ್ಷಿಕ ಅಂದಾಜು ರೂ. 30.00 ಲಕ್ಷಗಳು ವೆಚ್ಚವಾಗುತ್ತದೆ.

ಕಾರಣ ಮುಂದಿನ ಅವಧಿಗೆ ಹೊಸದಾಗಿ ಕೆ.ಟಿ.ಪಿ.ಪಿ ನಿಯಮಾವಳಿಯನ್ವಯ ಟೆಂಡರ್‌ನ್ನು ಆಹ್ವಾನಿಸಲು ಆರ್ಥಿಕ ಸಮಿತಿ ಸಭೆಯ ಅನುಮೋದನೆ ಕೋರಿ ಸಲ್ಲಿಸಿದೆ.

ಸಭೆಯ ತೀರ್ಮಾನ :-

ರಿಮ್ಸ್ ನೂತನ ಬೋಧಕ ಆಸ್ಪತ್ರೆಗೆ 2014-15ನೇ ಸಾಲಿಗೆ ಅವಶ್ಯವಿರುವ ಪಥ್ಯಾಹಾರ ಮತ್ತು ಆಸ್ಪತ್ರೆಯ ಅವಶ್ಯಕ ವಸ್ತುಗಳನ್ನು ಡಯಟಿಷಿಯನ್ ಇವರು ನೀಡುವ ಅಗತ್ಯತೆಗೆ ಅನುಗುಣವಾಗಿ ನಿಯಮಾನುಸಾರ ಖರೀದಿಸಲು ಅನುಮತಿಯನ್ನು ನೀಡಿ, ಎಲ್ಲಾ ಹಣ್ಣು ಮತ್ತು ತರಕಾರಿಗಳನ್ನು ಹಾಪ್ಸ್ ಕಾಂ ವತಿಯಿಂದ ಪಡೆದುಕೊಳ್ಳಲು ನಿರ್ದೇಶಕರು, ರಿಮ್ಸ್, ರಾಯಚೂರು ಇವರಿಗೆ ಸೂಚಿಸಲಾಯಿತು.

| ವಿಷಯ ಸೂಚಿ ಸಂಖ್ಯೆ. – 08 | ರಿಮ್ಸ್ ಸಂಸ್ಥೆಯಲ್ಲಿ ಮೈಕೋಬ್ಯಾಕ್ಟೀರಿಯಲ್ ಕಲ್ಚರ್ RNTCP ಅಡಿಯಲ್ಲಿ ಡಿಎಸ್‌ಟಿಯನ್ವಯ ಕೋಲ್ಡ್ ರೂಮ್ ಸ್ಥಾಪಿಸುವ ಕುರಿತು. |
|---|---|

Tender

ದಿನಾಂಕ : 14.03.2014 ರಂದು ಸಿಟಿಡಿ ಸದಸ್ಯರೊಂದಿಗೆ ಎನ್‌ಆರ್‌ಎಲ್ ರವರು ದಿನಾಂಕ : 11.03.2014 ರಂದು ಈ ಸಂಸ್ಥೆಯಲ್ಲಿ ಮೈಕೋಬ್ಯಾಕ್ಟಿರಿಯಲ್ ಕಲ್ಚರ್ ಮತ್ತು ಡಿಎಸ್‌ಟಿ ಪ್ರಯೋಗಶಾಲೆಯನ್ನು ಸ್ಥಾಪಿಸಲು ಈ ಸಂಸ್ಥೆಗೆ ಭೇಟಿ ನೀಡಿ ಈ ಪ್ರಯೋಗಶಾಲೆಯನ್ನು ಸ್ಥಾಪಿಸಲು ಅವಶ್ಯವಿರುವ ಪ್ರಮುಖ ಉಪಕರಣಗಳನ್ನು ಅವರ ಫೌಂಡೇಶನ್ ಮೂಲಕ ಒದಗಿಸುವುದಾಗಿ ಹಾಗೂ ಈ ಪ್ರಯೋಗಶಾಲೆಯನ್ನು ಸ್ಥಾಪಿಸಲು ಅವಶ್ಯವಿರುವ ಕೋಲ್ಡ್ ರೂಮನ್ನು ಸಂಸ್ಥೆಯ ವತಿಯಿಂದ ಸ್ಥಾಪಿಸಲು ಸೂಚಿಸಿರುತ್ತಾರೆ.

ದಿನಾಂಕ: 12.03.2014ರ ಪತ್ರದಲ್ಲಿ ಪ್ರಾಧ್ಯಾಪಕರು ಹಾಗೂ ವಿಭಾಗದ ಮುಖ್ಯಸ್ಥರು, ಮೈಕ್ರೋಬಾಯಲಜಿ ವಿಭಾಗ ಇವರು ಸ್ಥಾಪಿಸಬೇಕಾಗಿರುವ ಕೋಲ್ಡ್ ರೂಮ್‌ನ ವಿವರವಾದ ಸ್ಪೆಸಿಫಿಕೇಷನ್ ಲಗತ್ತಿಸಿ ಈ ಕೋಲ್ಡ್ ರೂಮ್‌ಗೆ ಅಂದಾಜು ರೂಪಾಯಿ 5.00 ಲಕ್ಷಗಳು ವೆಚ್ಚವಾಗುವಂತೆ ತಿಳಿಸಿರುತ್ತಾರೆ.

(ಸೈಯದ್ ಜಿಯಾವುದ್ದೀನ್)
ಸದಸ್ಯ ಕಾರ್ಯದರ್ಶಿ,
ಹಾಗು ಆರ್ಥಿಕ ಸಲಹೆಗಾರರು,
ರಿಮ್ಸ್ ಆರ್ಥಿಕ ಸಮಿತಿ,
ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,
ರಾಯಚೂರು

(ಡಾ. ತಿಪ್ಪೇರುದ್ರಯ್ಯ. ಸಿ)
ನಿರ್ದೇಶಕರು
ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,
ರಾಯಚೂರು

(ಎನ್. ಶಿವಶೈಲಂ) ಭಾ.ಆ.ಸೇ
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಹಾಗು ಅಧ್ಯಕ್ಷರು, ರಿಮ್ಸ್ ಆರ್ಥಿಕ ಸಮಿತಿ,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ,
ವೈದ್ಯಕೀಯ ಶಿಕ್ಷಣ, ಬೆಂಗಳೂರು

(ಎನ್. ಶಿವಶೈಲಂ)
ಸರ್ಕಾರದ ಪ್ರಧಾನ ಕಾರ್ಯದರ್ಶಿ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ

ಕಾರಣ ಸದರಿ ಕೋಲ್ಡ್ ರೂಮ್‌ನ್ನು ಕೆಟಿಪಿಪಿ ಕಾಯ್ದೆಯನ್ವಯ ಟೆಂಡರ್ ಆಹ್ವಾನಿಸಿ ಖರೀದಿಸಿ ಸ್ಥಾಪಿಸಲು ಆರ್ಥಿಕ ಸಮಿತಿ ಸಭೆಯ ಅನುಮೋದನೆ ಕೋರಿ ಸಲ್ಲಿಸಿದೆ.

ಸಭೆಯ ತೀರ್ಮಾನ :-

ರಿಮ್ಸ್ ಸಂಸ್ಥೆಯಲ್ಲಿ ಮೈಕ್ರೋಬ್ಯಾಕ್ಟೀರಿಯಲ್ ಕಲ್ಚರ್ **RNTCP** ಅಡಿಯಲ್ಲಿ ಡಿಎಸ್‌ಟಿಯನ್ವಯ ಕೋಲ್ಡ್ ರೂಮ್‌ನ್ನು ಸ್ಥಾಪಿಸಲು ಸಂಸ್ಥೆಯಲ್ಲಿ ಅನುದಾನದ ಲಭ್ಯತೆಯಿದ್ದಲ್ಲಿ ಮಾತ್ರ ಕೋಲ್ಡ್ ರೂಂ ನ್ನು ಸ್ಥಾಪಿಸಲು ಆರ್ಥಿಕ ಸಮಿತಿ ಸಭೆಯು ಸರ್ವಾನುಮತದಿಂದ ಅನುಮೋದನೆ ನೀಡಿತು.

| | |
|---|---|
| ವಿಷಯ ಸೂಚಿ ಸಂಖ್ಯೆ. – 09 | 2012-13ನೇ ಸಾಲಿನ ಚಾರ್ಟೆಡ್ ಅಕೌಂಟೆಂಟ್, ರಾಯಚೂರು ಇವರಿಂದ ನಡೆಸಲಾದ ಲೆಕ್ಕಪರಿಶೋಧನಾ ವರದಿಯನ್ನು ಅನುಮೋದಿಸುವ ಬಗ್ಗೆ. |

Audit

ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ 2012-13ನೇ ಸಾಲಿನ ಲೆಕ್ಕ ಪರಿಶೋಧನಾ ವರದಿಯನ್ನು ಮೆ॥ ಪಿ.ಕೆ.ಸುಬ್ರಮಣ್ಯಂ & ಕಂ, ಚಾರ್ಟೆಡ್ ಅಕೌಂಟೆಂಟ್, ರಾಯಚೂರು ಇವರಿಂದ ಜರುಗಿಸಲಾಗಿದ್ದು, ಸದರಿ ಲೆಕ್ಕಪರಿಶೋಧನಾ ವರದಿಗೆ ಅನುಮೋದನೆ ನೀಡುವಂತೆ, ಆರ್ಥಿಕ ಸಮಿತಿ ಸಭೆಯ ಅನುಮೋದನೆ ಕೋರಿ ಸಲ್ಲಿಸಿದೆ.

ಸಭೆಯ ತೀರ್ಮಾನ :-

ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ 2012-13ನೇ ಸಾಲಿನ ಲೆಕ್ಕ ಪರಿಶೋಧನಾ ವರದಿಯನ್ನು ಆರ್ಥಿಕ ಸಮಿತಿ ಸಭೆಯು ಪರಿಶೀಲಿಸಿ ಸರ್ವಾನುಮತದಿಂದ ಅನುಮೋದನೆ ನೀಡಲಾಯಿತು.

| | |
|---|---|
| ವಿಷಯ ಸೂಚಿ ಸಂಖ್ಯೆ. – 10 | 2012-13ನೇ ಸಾಲಿಗೆ ಮಹಾಲೇಖಪಾಲರು, ಬೆಂಗಳೂರು ಇವರು ಸಲ್ಲಿಸಿರುವ ಲೆಕ್ಕಪರಿಶೋಧನಾ ವರದಿಯ ಆಕ್ಷೇಪಣೆಗಳ ಕುರಿತು. |

Audit

ಮಹಾಲೇಖಪಾಲರು, ಬೆಂಗಳೂರು ಇವರು ದಿನಾಂಕ 24.01.2014 ರಿಂದ ದಿನಾಂಕ 03.02.2014 ರವರೆಗೆ ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಗು ರಿಮ್ಸ್ ಬೋಧಕ ಆಸ್ಪತ್ರೆಯ 2012-13ನೇ ಸಾಲಿಗೆ ಸಂಬಂಧಿಸಿದ ಲೆಕ್ಕಪತ್ರ ತಪಾಸಣೆಯ ಜರುಗಿಸಿ, ಲೆಕ್ಕಪರಿಶೋಧನಾ ವರದಿಯನ್ನು ಈ ಕಾರ್ಯಲಯಕ್ಕೆ ಸಲ್ಲಿಸಿದ್ದು, ಈ ವರದಿಗೆ ಸಂಬಂಧಪಟ್ಟಂತೆ ಆಕ್ಷೇಪಣೆಗಳ ಅನುಪಾಲನಾ ವರದಿಯನ್ನು ಸಿದ್ದಪಡಿಸಲಾಗುತ್ತಿದ್ದು, ಈ ವರದಿಯನ್ನು ಆರ್ಥಿಕ ಸಮಿತಿ ಸಭೆಯ ಗಮನಕ್ಕೆ ತಂದು ಸೂಕ್ತ ಮಾರ್ಗದರ್ಶನ ಕೋರಿದೆ.

(ಸೈಯದ್ ಜೀಯಾವುದ್ದೀನ್)
ಸದಸ್ಯ ಕಾರ್ಯದರ್ಶಿ,
ಹಾಗು ಆರ್ಥಿಕ ಸಲಹೆಗಾರರು,
ರಿಮ್ಸ್ ಆರ್ಥಿಕ ಸಮಿತಿ,
ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,
ರಾಯಚೂರು

(ಡಾ. ತಿಪ್ಪೇರುದ್ರಯ್ಯ. ಸಿ)
ನಿರ್ದೇಶಕರು
ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,
ರಾಯಚೂರು

(ಎನ್. ಶಿವಶೈಲಂ) ಭಾ.ಆ.ಸೇ
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಹಾಗು ಅಧ್ಯಕ್ಷರು, ರಿಮ್ಸ್ ಆರ್ಥಿಕ ಸಮಿತಿ,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
ವೈದ್ಯಕೀಯ ಶಿಕ್ಷಣ, ಬೆಂಗಳೂರು
**(ಎನ್. ಶಿವಶೈಲಂ)**
**ಸರ್ಕಾರದ ಪ್ರಧಾನ ಕಾರ್ಯದರ್ಶಿ**
**ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ**

ಸಭೆಯ ತೀರ್ಮಾನ :-

ಮಹಾಲೇಖಪಾಲರು, ಬೆಂಗಳೂರು ಇವರಿಂದ ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಗು ರಿಮ್ಸ್ ಬೋಧಕ ಆಸ್ಪತ್ರೆಯ 2012-13ನೇ ಸಾಲಿನ ಲೆಕ್ಕಪತ್ರ ತಪಾಸಣೆ ಜರುಗಿಸಿ ಸಲ್ಲಿಸಿರುವ ಆಕ್ಷೇಪಣೆಗಳಿಗೆ ಕಂಡಿಕೆವಾರು (ಪ್ಯಾರವೈಜ್) ಉತ್ತರಗಳನ್ನು ಸಿದ್ದಪಡಿಸಿ, ಮಹಾಲೇಖಪಾಲರು, ಬೆಂಗಳೂರು ಹಾಗೂ ಸರ್ಕಾರಕ್ಕೆ ಸಲ್ಲಿಸುವಂತೆ ಆರ್ಥಿಕ ಸಮಿತಿ ಸಭೆಯು ನಿರ್ದೇಶಕರು, ರಿಮ್ಸ್, ರಾಯಚೂರು ಇವರಿಗೆ ಸೂಚಿಸಲಾಯಿತು.

| | |
|---|---|
| ವಿಷಯ ಸೂಚಿ ಸಂಖ್ಯೆ. – 11 | ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಆವರಣದಲ್ಲಿ ಗೃಹ ವೈದ್ಯರುಗಳ ವಸತಿ ನಿಲಯಗಳನ್ನು ನಿರ್ಮಿಸಲು ಅವಶ್ಯವಿರುವ ರೂ. 25.00 ಕೋಟಿಗಳ ಅಂದಾಜು ಪಟ್ಟಿಗೆ ಅನುಮೋದನೆ ನೀಡುವ ಬಗ್ಗೆ |

ದಿನಾಂಕ 17.01.2014ರಂದು ಈ ಸಂಸ್ಥೆಯಲ್ಲಿ ಸ್ನಾತಕೋತ್ತರ ವಿಷಯಗಳನ್ನು ಪ್ರಾರಂಭಿಸುವ ಸಂಬಂಧ ಭಾರತೀಯ ವೈದ್ಯಕೀಯ ಮಂಡಳಿಯಿಂದ ಪರಿವೀಕ್ಷಣೆ ನಡೆದಿದ್ದು, ತದನಂತರ ದಿನಾಂಕ 06 & 07.02.2014ರಂದು ಡಾ.ಎಸ್.ಬಿ.ಸಿವಾಚ್, ಅಧ್ಯಕ್ಷರು, ಭಾರತೀಯ ವೈದ್ಯಕೀಯ ಮಂಡಳಿ ಇವರ ನೇತೃತ್ವದಲ್ಲಿ ದೆಹಲಿಯಲ್ಲಿ ಜರುಗಿದ ಸಭೆಯಲ್ಲಿ ಸ್ನಾತಕೋತ್ತರ ಹಾಗೂ ಗೃಹ ವೈದ್ಯರುಗಳ ವಸತಿ ಗೃಹಗಳ ಲಭ್ಯವಿಲ್ಲದೇ ಇರುವುದರಿಂದ ಸ್ನಾತಕೋತ್ತರ ಕೋರ್ಸ್‌ನ್ನು ನೀಡಲು ಭಾರತೀಯ ವೈದ್ಯಕೀಯ ಮಂಡಳಿಯು ನಿರಾಕರಿಸಿರುತ್ತದೆ. ರಿಮ್ಸ್ ಸಂಸ್ಥೆಯ ಅವರಣದಲ್ಲಿ ಗೃಹ ವೈದ್ಯರುಗಳು, ಸ್ನಾತಕೋತ್ತರ ವಿಭಾಗಗಳು ಮತ್ತು ಸ್ಥಾನಿಕ ವೈದ್ಯರುಗಳ ವಸತಿ ನಿಲಯಗಳನ್ನು ನಿರ್ಮಿಸಲು ಅವಶ್ಯವಿರುವ ಅಂದಾಜು ಪಟ್ಟಿಯನ್ನು ಸಲ್ಲಿಸುವಂತೆ ಕಾರ್ಯನಿರ್ವಾಹಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ರಾಯಚೂರು ಇವರನ್ನು ಕೋರಲಾಗಿ ಕಾರ್ಯನಿರ್ವಾಹಕ ಅಭಿಯಂತರರು, ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ರಾಯಚೂರು ಇವರು ಪತ್ರ ಸಂಖ್ಯೆ. ಕಾನಿಇಂ / ಲೋ.ಇ / ರಾವಿರಾ : ತಾಶಾ – 2: ವಸತಿ ಗೃಹ :: 2013-14 / 5203 ದಿನಾಂಕ 20.02.2014ರಲ್ಲಿರೂ. 25.00 ಕೋಟಿಗಳ ವಿವರವಾದ ಅಂದಾಜು ಪಟ್ಟಿಯನ್ನು ಈ ಕಾರ್ಯಲಯಕ್ಕೆ ಸಲ್ಲಿಸಿರುತ್ತಾರೆ.

ಕಾರಣ ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ ಸ್ನಾತಕೋತ್ತರ ವಿಷಯಗಳ ಪ್ರವೇಶಾತಿಯನ್ನು ಪಡೆಯಲು ಅವಶ್ಯವಿರುವ ಒಟ್ಟು 132 (66 ಪುರುಷ ಮತ್ತು 66 ಮಹಿಳಾ) ಸ್ನಾತಕೋತ್ತರ ವೈದ್ಯರ ವಸತಿ ಗೃಹಗಳನ್ನು ನಿರ್ಮಿಸುವುದು ಅತಿ ಅವಶ್ಯಕವಾಗಿದ್ದು, ಭಾರತೀಯ ವೈದ್ಯಕೀಯ ಮಂಡಳಿಯ ನ್ಯೂನತೆಯನ್ನು ಸರಿಪಡಿಸಲು ಹಾಗೂ ಗೃಹ ವೈದ್ಯರಿಗೆ ಹಾಗೂ ಸ್ನಾತಕೋತ್ತರ ವಿದ್ಯಾರ್ಥಿಗಳ ವ್ಯಾಸಂಗದ ಹಿತೃಷ್ಟಿಯಿಂದ ರೂ. 25.00 ಕೋಟಿ (ಇಪ್ಪತ್ತೈದು ಕೋಟಿ ರೂಪಾಯಿಗಳು ಮಾತ್ರ) ಗಳಿಗೆ ಸಕ್ಷಮ ಪ್ರಾಧಿಕಾರದಿಂದ ದೃಡಿಕರಿಸಿ ಸಲ್ಲಿಸಿರುವ ಈ ವಿವರವಾದ ಅಂದಾಜು ಪಟ್ಟಿಗೆ ಆರ್ಥಿಕ ಸಮಿತಿ ಸಭೆಯ ಅನುಮೋದನೆ ಕೋರಿ ಸಲ್ಲಿಸಿದೆ.

(ಸೈಯದ್ ಜಿಯಾವುದ್ದೀನ್)
ಸದಸ್ಯ ಕಾರ್ಯದರ್ಶಿ,
ಹಾಗು ಆರ್ಥಿಕ ಸಲಹೆಗಾರರು,
ರಿಮ್ಸ್ ಆರ್ಥಿಕ ಸಮಿತಿ,
ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,
ರಾಯಚೂರು

(ಡಾ. ತಿಪ್ಪೇರುದ್ರಪ್ಪ. ಸಿ)
ನಿರ್ದೇಶಕರು
ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,
ರಾಯಚೂರು

(ಎನ್. ಶಿವಶೈಲಂ) ಭಾ.ಆ.ಸೇ
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಹಾಗು ಅಧ್ಯಕ್ಷರು, ರಿಮ್ಸ್ ಆರ್ಥಿಕ ಸಮಿತಿ,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ,
ವೈದ್ಯಕೀಯ ಶಿಕ್ಷಣ), ಬೆಂಗಳೂರು
ಸರ್ಕಾರದ ಪ್ರಧಾನ ಕಾರ್ಯದರ್ಶಿ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ

ಸಭೆಯ ತೀರ್ಮಾನ :–

ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಆವರಣದಲ್ಲಿ ಗೃಹ ವೈದ್ಯರುಗಳ ವಸತಿ ನಿಲಯಗಳನ್ನು ನಿರ್ಮಿಸಲು ಅವಶ್ಯವಿರುವ ರೂ. 25.00 ಕೋಟಿಗಳ ಅಂದಾಜು ಪಟ್ಟಿಗೆ ಕ್ಯಾಬಿನೆಟ್ ಅನುಮೋದನೆಯನ್ನು ಪಡೆಯಬೇಕಾಗಿರುವುದರಿಂದ ಸಂಪೂರ್ಣ ವಿವರಗಳೊಂದಿಗೆ ಪುನಃ ಪರಿಶೀಲಿಸಿ ಸರ್ಕಾರದ ಅನುಮೋದನೆಗೆ ಸಲ್ಲಿಸುವಂತ ಮಾನ್ಯ ನಿರ್ದೇಶಕರು, ರಿಮ್ಸ್. ರಾಯಚೂರು ಇವರಿಗೆ ಸೂಚಿಸಲಾಯಿತು.

| | |
|---|---|
| ವಿಷಯ ಸೂಚಿ ಸಂಖ್ಯೆ – 12 | 5ನೇ ಆಡಳಿತ ಮಂಡಳಿಯ ಅನುಮೋದನೆ ಮೇರಗೆ ಗ್ರೂಪ್ ಸಿ ಮತ್ತು ಗ್ರೂಪ್ ಡಿ ಸಿಬ್ಬಂದಿಗಳ ಖಾಯಂ ನೇಮಕಾತಿ ಮಾಡಲಾಗಿದ್ದು, ಖಾಯಂ ನೇಮಕಾತಿ ಮಾಡಿರುವ ಕುರಿತು, ಮಹಾಲೇಖಪಾಲರು, ಬೆಂಗಳೂರು ಇವರು ಆಕ್ಷೇಪಣೆ ಸಲ್ಲಿಸಿರುವ ಬಗ್ಗೆ |

ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ ಈ ಕೆಳಕಂಡ ಗ್ರೂಪ್ ಸಿ ಮತ್ತು ಗ್ರೂಪ್ ಡಿ ಸಿಬ್ಬಂದಿಗಳನ್ನು ದಿನಾಂಕ 21.09.2007 ರಂದು ಜರುಗಿದ 5ನೇ ಆಡಳಿತ ಮಂಡಳಿ ಸಭೆಯ ಅನುಮೋದನೆ ಪಡೆದು ಖಾಯಂ ನೇಮಕಾತಿ ಮಾಡಲಾಗಿದ್ದು, ಖಾಯಂ ನೇಮಕಾತಿ ಮಾಡಲಾದ ಗ್ರೂಪ್ ಸಿ ಮತ್ತು ಗ್ರೂಪ್ ಡಿ ಸಿಬ್ಬಂದಿಗಳ ಪಟ್ಟಿಗೆ ಆಡಳಿತ ಮಂಡಳಿ ಅಧ್ಯಕ್ಷರ ಸಹಿ ಇರದೇ ಇರುವುದರಿಂದ ದಿನಾಂಕ 21.12.2009 ರಿಂದ 02.01.2011ರವರೆಗೆ ರಿಮ್ಸ್ ಸಂಸ್ಥೆಯಲ್ಲಿ ಜರುಗಿದ ಮೊದಲ ಲೆಕ್ಕ ಪತ್ರ ತಪಾಸಣೆಯಲ್ಲಿ ಮಹಾಲೇಖಪಾಲರು, ಬೆಂಗಳೂರು ಇವರು ಈ ನೇಮಕಾತಿ ಕುರಿತು ಆಕ್ಷೇಪಣೆಯನ್ನು ಸಲ್ಲಿಸಿರುತ್ತಾರೆ. ಖಾಯಂ ನೇಮಕಾತಿ ಮಾಡಲಾದ ಬೋಧಕೇತರ ಸಿಬ್ಬಂದಿಗಳ ವಿವರ ಈ ಕೆಳಗಿನಂತಿದೆ.

| ಕ್ರಮ ಸಂಖ್ಯೆ | ಹೆಸರು | ಪದನಾಮ | ಕರ್ತವ್ಯಕ್ಕೆ ಹಾಜರಾದ ದಿನಾಂಕ |
|---|---|---|---|
| 1 | ಶ್ರೀಮತಿ ರೀನಾ ಪೌನಿ ಪಗಾರ್ | ಹೆಲ್ತ್ ಎಜುಕೇಟರ್ | 01.09.2006 |
| 2 | ಶ್ರೀಮತಿ ಸಮಾಪ್ತಿ ಸಿಂಧೆ | ಪ್ರಯೋಗ ಶಾಲ ತಂತ್ರಜ್ಞರು | 01.09.2006 |
| 3 | ಶ್ರೀ.ಪಿ. ಶೇಖರ್ | ಪ್ರ.ದ.ಸ | 01.02.2007 |
| 4 | ಶ್ರೀ ಜಬೀವುಲ್ಲಾ | ಅಟೆಂಡರ್ | 01.02.2007 |
| 5 | ಶ್ರೀ ಮೊಹಮ್ಮದ್ ಆರೀಫ್ | ಅಟೆಂಡರ್ | 01.02.2007 |
| 6 | ಶ್ರೀ ನರಸಿಂಹಲು | ಪ್ರಯೋಗಶಾಲ ತಂತ್ರಜ್ಞರು | 01.03.2007 |

ಕಾರಣ ಮಹಾಲೇಖಪಾಲರು, ಬೆಂಗಳೂರು ಇವರು ಸಲ್ಲಿಸಿರುವ ಆಕ್ಷೇಪಣೆಗೆ ಅನುಪಾಲನಾ ವರದಿಯನ್ನು ಸಲ್ಲಿಸಬೇಕಾಗಿರುವುದರಿಂದ ಈ ಮೇಲ್ಕಂಡ ಗ್ರೂಪ್ ಸಿ ಮತ್ತು ಗ್ರೂಫ್ ಡಿ ಸಿಬ್ಬಂದಿಗಳನ್ನು ಖಾಯಂ ನೇಮಕಾತಿ ಮಾಡಿರುವ ಆರ್ಥಿಕ ಸಮಿತಿ ಸಭೆಯ ಮಾರ್ಗದರ್ಶನ ಕೋರಿ ಸಲ್ಲಿಸಿದೆ.

(ಸೈಯದ್ ಜೀಯಾವುದ್ದೀನ್)
ಸದಸ್ಯ ಕಾರ್ಯದರ್ಶಿ,
ಹಾಗು ಆರ್ಥಿಕ ಸಲಹೆಗಾರರು,
ರಿಮ್ಸ್ ಆರ್ಥಿಕ ಸಮಿತಿ,
ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,
ರಾಯಚೂರು

(ಡಾ. ತಿಪ್ಪೇರುದ್ರಯ್ಯ. ಸಿ)
ನಿರ್ದೇಶಕರು
ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,
ರಾಯಚೂರು

(ಎನ್. ಶಿವಶೈಲಂ) ಭಾ.ಆ.ಸೇ
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಹಾಗು ಅಧ್ಯಕ್ಷರು, ರಿಮ್ಸ್ ಆರ್ಥಿಕ ಸಮಿತಿ,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
ವೈದ್ಯಕೀಯ ಶಿಕ್ಷಣ, ಬೆಂಗಳೂರು

(ಎನ್. ಶಿವಶೈಲಂ)
ಸರ್ಕಾರದ ಪ್ರ... ಕಾರ್ಯದರ್ಶಿ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ

ಸಭೆಯ ತೀರ್ಮಾನ :–

ಮಹಾಲೇಖಪಾಲರು, ಬೆಂಗಳೂರು ಇವರು ಲೆಕ್ಕಪತ್ರ ತಪಾಸಣೆಯ ವರದಿಯಲ್ಲಿ ಗ್ರೂಪ್ ಸಿ ಮತ್ತು ಗ್ರೂಪ್ ಡಿ ಸಿಬ್ಬಂದಿಗಳ ಖಾಯಂ ನೇಮಕಾತಿ ಆಕ್ಷೇಪಣೆ ಕುರಿತು ಪರಿಶೀಲಿಸಲಾಗಿ, ಈ ಕುರಿತು ಕೂಲಂಕೂಷವಾಗಿ ಪುನಃ ಪರಿಶೀಲಿಸಿ ಮುಂದಿನ ಆರ್ಥಿಕ ಸಮಿತಿ ಸಭೆಯಲ್ಲಿ ಮಂಡಿಸಲು ನಿರ್ದೇಶಕರು, ರಿಮ್ಸ್, ರಾಯಚೂರು ಇವರಿಗೆ ಸೂಚಿಸಲಾಯಿತು.

| | |
|---|---|
| ವಿಷಯ ಸೂಚಿ ಸಂಖ್ಯೆ – 13 | ಡಾ. ಶರಣ ಬಸವರಾಜ್, ತುರ್ತು ಚಿಕಿತ್ಸಾ ಘಟಕದ ವೈದ್ಯಾಧಿಕಾರಿಗಳು, ರಿಮ್ಸ್, ರಾಯಚೂರು ಇವರಿಗೆ ಉನ್ನತ ವ್ಯಾಸಂಗಕ್ಕೆ ಹೋಗಲು ಅನುಮತಿ ನೀಡುವ ಬಗ್ಗೆ |

EST

ಡಾ. ಶರಣ ಬಸವರಾಜ್ ಇವರು ಕಳೆದ ಐದು ವರ್ಷಗಳಿಂದ (ದಿನಾಂಕ 01.06.2008 ರಿಂದ 12.10.2010ರವರೆಗೆ ಮಾನಸಿಕ ವಿಭಾಗದಲ್ಲಿ ಕಿರಿಯ ಸ್ಥಾನಿಕರಾಗಿ ಹಾಗೂ ದಿನಾಂಕ 13.10.2010 ರಿಂದ ದಿನಾಂಕ 01.06.2013ರವರೆಗೆ ತುರ್ತು ಚಿಕಿತ್ಸಾ ಘಟಕದ ವೈದ್ಯಾಧಿಕಾರಿಗಳಾಗಿ) ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಪ್ರಸಕ್ತ 2013ನೇ ಸಾಲಿನ ಸ್ನಾತಕೋತ್ತರ ಪದವಿ ಕೌನ್ಸಿಲಿಂಗ್‌ನಲ್ಲಿ ಎಂ.ಡಿ (ಮಾನಸಿಕ ವಿಭಾಗ) ಸೀಟು ದೊರಕಿದ್ದು, ಉನ್ನತ ವ್ಯಾಸಂಗಕ್ಕೆ ಹೋಗಲು ಅನುಮತಿ ನೀಡುವಂತೆ ಕೋರಿ ಹಾಗೂ ಸ್ನಾತಕೋತ್ತರ ಪದವಿ ವ್ಯಾಸಂಗವು ಮುಗಿದ ನಂತರ ರಿಮ್ಸ್ ಸಂಸ್ಥೆಯಲ್ಲಿ ಸೇವೆಯನ್ನು ಮುಂದುವರೆಸುವುದಾಗಿ ತಿಳಿಸಿರುತ್ತಾರೆ. ಸದರಿ ವೈದ್ಯರ ಖಾಯಂಪೂರ್ವ ಸೇವಾವಧಿಯನ್ನು ತೃಪ್ತಿಕರವಾಗಿ ಘೋಷಣೆ ಮಾಡಲಾಗಿದ್ದು, ಸಂಸ್ಥೆಯ ಬೈಲಾ ಪುಟ ಸಂಖ್ಯೆ 47 ಪ್ಯಾರ 18ರಲ್ಲಿ ಮೂರು ತಿಂಗಳಿನ ಮೇಲ್ಪಟ್ಟು ಉನ್ನತ ವ್ಯಾಸಂಗಕ್ಕೆ ತೆರಳಲು ಅನುಮತಿ ನೀಡುವ ಬಗ್ಗೆ ಸಂಸ್ಥೆಯ ನಿರ್ದೇಶಕರಿಗೆ ಅವಕಾಶ ಇಲ್ಲದೇ ಇರುವುದರಿಂದ ಸದರಿ ವೈದ್ಯರಿಗೆ ಉನ್ನತ ವ್ಯಾಸಂಗಕ್ಕೆ ಹೋಗಲು ಅನುಮತಿ ನೀಡುವ ಬಗ್ಗೆ ಆರ್ಥಿಕ ಸಮಿತಿ ಸಭೆಯ ಅನುಮತಿ ಕೋರಿ ಸಲ್ಲಿಸಿದೆ.

ಸಭೆಯ ತೀರ್ಮಾನ :–

ಡಾ. ಶರಣ ಬಸವರಾಜ್, ತುರ್ತು ಚಿಕಿತ್ಸಾ ಘಟಕದ ವೈದ್ಯಾಧಿಕಾರಿಗಳು, ರಿಮ್ಸ್, ರಾಯಚೂರು ಇವರು ಸಂಸ್ಥೆಯ ಅನುಮತಿ ಪಡೆಯದೇ ಉನ್ನತ ವ್ಯಾಸಂಗಕ್ಕೆ ತೆರಳಿರುವುದರಿಂದ ಸದರಿ ವೈದ್ಯರಿಗೆ ನೋಟಿಸ್ ಜಾರಿ 30 ದಿನಗಳ ಒಳಗಾಗಿ ಕರ್ತವ್ಯ ಹಾಜರಾಗುವಂತೆ ತಿಳಿಸಲು ಸೂಚಿಸಿ, ಸದರಿ ವೈದ್ಯರು 30 ದಿನಗಳೊಳಗಾಗಿ ಕರ್ತವ್ಯಕ್ಕೆ ವರದಿ ಮಾಡಿಕೊಳ್ಳದಿದ್ದಲ್ಲಿ ಸೇವೆಯಿಂದ ವಜಾಗೊಳಿಸಲು ಸೂಚಿಸಲಾಯಿತು.

(ಸೈಯದ್ ಜಿಯಾವುದ್ದೀನ್)
ಸದಸ್ಯ ಕಾರ್ಯದರ್ಶಿ,
ಹಾಗು ಆರ್ಥಿಕ ಸಲಹೆಗಾರರು,
ರಿಮ್ಸ್ ಆರ್ಥಿಕ ಸಮಿತಿ,
ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
(ರಾಯಚೂರು)

(ಡಾ. ತಿಪ್ಪೇರುದ್ರಯ್ಯ. ಸಿ)
ನಿರ್ದೇಶಕರು
ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,
ರಾಯಚೂರು

(ಎನ್. ಶಿವಶೈಲಂ) ಭಾ.ಆ.ಸೇ
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಹಾಗು ಅಧ್ಯಕ್ಷರು, ರಿಮ್ಸ್ ಆರ್ಥಿಕ ಸಮಿತಿ,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ,
ವೈದ್ಯಕೀಯ ಶಿಕ್ಷಣ, ಬೆಂಗಳೂರು

(ಎನ್. ಶಿವಶೈಲಂ)
ಸರ್ಕಾರದ ಪ್ರಧಾನ ಕಾರ್ಯದರ್ಶಿ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾ

| | |
|---|---|
| ವಿಷಯ ಸೂಚಿ ಸಂಖ್ಯೆ. – 14 | ಭಾರತೀಯ ವೈದ್ಯಕೀಯ ಮಂಡಳಿಯ ತಪಾಸಣೆ ಸಮಯದಲ್ಲಿ ಹಾಗು ಪರೀಕ್ಷಾ ವೇಳೆಯಲ್ಲಿ ಪರೀಕ್ಷಾ ಮೇಲ್ವಿಚಾರಿಕರಿಗೆ ಮತ್ತು ನಿರ್ದೇಶಕರು ಹಾಗು ಸಂಸ್ಥೆಯ ಸಿಬ್ಬಂದಿಗಳು ಸರ್ಕಾರದ ಹಂತದಲ್ಲಿ ಜರುಗುವ ಸಭೆಗಳು ಹಾಗು ಸಂಸ್ಥೆಯ ಇತರ ಕೆಲಸ ಕಾರ್ಯಗಳ ನಿಮಿತ್ತ ಬೆಂಗಳೂರು ಹಾಗು ಇತರ ಸ್ಥಳಗಳಲ್ಲಿ ವಾಸ್ತವ್ಯ ಮಾಡಿದಾಗ ವಸತಿ ಗೃಹದ ವೆಚ್ಚವನ್ನು ಮರು ಪಾವತಿಸಲು ಅನುಮತಿ ನೀಡುವ ಬಗ್ಗೆ. |

ಭಾರತೀಯ ವೈದ್ಯಕೀಯ ಮಂಡಳಿಯು ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಗೆ ವೈದ್ಯ ವಿದ್ಯಾರ್ಥಿಗಳ ಪ್ರವೇಶ ಹಾಗೂ ಸ್ನಾತಕೋತ್ತರ ವಿಷಯಗಳ ಪ್ರವೇಶಾತಿಗೆ ಅನುಮತಿ ನೀಡುವ ಸಂಬಂಧ ಭೇಟಿ ನೀಡಿದ ಸಮಯದಲ್ಲಿ ಭಾರತೀಯ ವೈದ್ಯಕೀಯ ಮಂಡಳಿಯು ನಿಯೋಜಿಸುವಂತಹ ಪರಿಶೀಲನಾ ಸಿಬ್ಬಂದಿಗಳಿಗೆ ಹಾಗು ಪರೀಕ್ಷಾ ವೇಳೆಯಲ್ಲಿ ರಾಜೀವ್ ಗಾಂಧಿ ಆರೋಗ್ಯ ವಿಶ್ವವಿದ್ಯಾಲಯದಿಂದ ನಿಯೋಜಿಸಲ್ಪಡುವ ಪರೀಕ್ಷಾ ಮೇಲ್ವಿಚಾರಿಕರು ಸಂಸ್ಥೆಗೆ ಭೇಟಿ ನೀಡಿದಾಗ, ಸಂಸ್ಥೆಯಲ್ಲಿ ಅತಿಥಿ ಗೃಹಗಳು ಲಭ್ಯವಿಲ್ಲದೇ ಇರುವುದರಿಂದ ಸದರಿಯವರಿಗೆ ಬೇಕಾದ ವಸತಿ ವ್ಯವಸ್ಥೆಯನ್ನು ಉತ್ತಮ ಹೋಟೆಲ್‌ಗಳಲ್ಲಿ ಕಲ್ಪಿಸಬೇಕಾಗುತ್ತದೆ.

ಹಾಗೂ ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಬೋಧಕ ಹಾಗೂ ಬೋಧಕೇತರ ಸಿಬ್ಬಂದಿಗಳು ಸರ್ಕಾರದ ಹಂತದಲ್ಲಿ ಜರುಗುವ ಸಮಿತಿ ಸಭೆಗಳು (ಆಡಳಿತ ಮಂಡಳಿ ಸಭೆ, ಆರ್ಥಿಕ ಸಮಿತಿ ಸಭೆ, ಮಾಸಿಕ ಹಂತದ ಪರಿಶೀಲನಾ ಸಭೆ, ಮಾನ್ಯ ಸಚಿವರು ಹಾಗೂ ಸರ್ಕಾರದ ಕಾರ್ಯದರ್ಶಿಗಳು ನಡೆಸುವ ಸಭೆಗಳು), ಸಂಸ್ಥೆಗೆ ಸಂಬಂಧಿಸಿದ ಪ್ರಸ್ತಾವನೆಗಳನ್ನು ಖುದ್ದಾಗಿ ಸರ್ಕಾರಕ್ಕೆ ಸಲ್ಲಿಸುವುದು, ಅನುದಾನ ಬಿಡುಗಡೆ, ರಾಜೀವ್ ಗಾಂಧಿ ಆರೋಗ್ಯ ವಿಶ್ವವಿದ್ಯಾಲಯಕ್ಕೆ ಶೈಕ್ಷಣಿಕ ವಿಷಯಗಳಿಗೆ ಸಂಬಂಧಿಸಿದಂತೆ ಹಾಗೂ ಇನ್ನಿತರ ವಿಷಯಗಳಿಗೆ ಸಂಬಂಧಿಸಿದಂತೆ ಸಂಸ್ಥೆಯ ಸಿಬ್ಬಂದಿಗಳು ದೂರದ ರಾಯಚೂರಿನಿಂದ ಬೆಂಗಳೂರಿಗೆ ಬಂದಾಗ ರಾತ್ರಿ ವೇಳೆಯಲ್ಲಿ ವಾಸ್ತವ್ಯ ಹೂಡುವುದು ಅನಿವಾರ್ಯವಾಗುತ್ತದೆ.

ಕಾರಣ ಇಂತಹ ಸಮಯದಲ್ಲಿ ಭಾರತೀಯ ವೈದ್ಯಕೀಯ ಮಂಡಳಿಯ ಪರಿಶೀಲನಾ ಅಧಿಕಾರಿಗಳು, ರಾಜೀವ್ ಗಾಂಧಿ ಆರೋಗ್ಯ ವಿಶ್ವವಿದ್ಯಾಲಯದ ಮೇಲ್ವಿಚಾರಿಕರು ಹಾಗೂ ನಿರ್ದೇಶಕರು ಮತ್ತು ಸಂಸ್ಥೆಯ ಇತರ ಸಿಬ್ಬಂದಿಗಳು ಬೆಂಗಳೂರು ಹಾಗೂ ಇನ್ನಿತರ ಸ್ಥಳಗಳಲ್ಲಿ ಕರ್ತವ್ಯದ ನಿಮಿತ್ತ ವಾಸ್ತವ್ಯ ಹೂಡಿದಾಗ ತಗುಲಬಹುದಾದ ವಸತಿ ಗೃಹದ ವಾಸ್ತವ್ಯದ ವೆಚ್ಚವನ್ನು ಸಂಸ್ಥೆಯ ಮುಖಾಂತರ ಪಾವತಿಸುವ ಬಗ್ಗೆ ಆರ್ಥಿಕ ಸಮಿತಿ ಸಭೆಯ ಅನುಮೋದನೆ ಕೋರಿ ಸಲ್ಲಿಸಿದೆ.

ಸಭೆಯ ತೀರ್ಮಾನ :–

ಭಾರತೀಯ ವೈದ್ಯಕೀಯ ಮಂಡಳಿಯು ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಗೆ ಭೇಟಿ ನೀಡಿದ ಸಮಯದಲ್ಲಿ, ಪರೀಕ್ಷಾ ವೇಳೆಯಲ್ಲಿ ರಾಜೀವ್ ಗಾಂಧಿ ಆರೋಗ್ಯ ವಿಶ್ವವಿದ್ಯಾಲಯದಿಂದ ನಿಯೋಜಿಸಲ್ಪಡುವ ಪರೀಕ್ಷಾ ಮೇಲ್ವಿಚಾರಿಕರು ಸಂಸ್ಥೆಗೆ ಭೇಟಿ ನೀಡಿದ ಸಮಯದಲ್ಲಿ ಮತ್ತು ಸಂಸ್ಥೆಯ ಬೋಧಕ ಹಾಗೂ ಬೋಧಕೇತರ ಸಿಬ್ಬಂದಿಗಳು ಸರ್ಕಾರದ ಹಂತದಲ್ಲಿ ಜರುಗುವ ಸಮಿತಿ ಸಭೆಗಳು ಹಾಗೂ ಕರ್ತವ್ಯದ ನಿಮಿತ್ತ ಬೆಂಗಳೂರು ಹಾಗೂ ಇತರ ಸ್ಥಳಗಳಿಗೆ ತೆರಳಿ ವಾಸ್ತವ್ಯ ಹೂಡಿದಾಗ ಅದಕ್ಕೆ ತಗುಲಬಹುದಾದ ವಸತಿ ಗೃಹದ ವಾಸ್ತವ್ಯದ ವೆಚ್ಚವನ್ನು ಆಡಳಿತ ವೆಚ್ಚವಂದು ಪರಿಗಣಿಸುವಂತೆ ಸೂಚಿಸಲು ನಿರ್ದೇಶಕರು, ರಿಮ್ಸ್, ರಾಯಚೂರು ಇವರಿಗೆ ಸೂಚಿಸಲಾಯಿತು.

(ಸೈಯದ್ ಜೀಯಾವುದ್ದೀನ್)
ಸದಸ್ಯ ಕಾರ್ಯದರ್ಶಿ,
ಹಾಗು ಆರ್ಥಿಕ ಸಲಹೆಗಾರರು,
ರಿಮ್ಸ್ ಆರ್ಥಿಕ ಸಮಿತಿ,
ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,
ರಾಯಚೂರು

(ಡಾ. ತಿಪ್ಪೇರುದ್ರಯ್ಯ. ಸಿ)
ನಿರ್ದೇಶಕರು
ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,
ರಾಯಚೂರು

(ಎನ್. ಶಿವಶೈಲಂ) ಭಾ.ಆ.ಸೇ
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಹಾಗು ಅಧ್ಯಕ್ಷರು, ರಿಮ್ಸ್ ಆರ್ಥಿಕ ಸಮಿತಿ,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
ವೈದ್ಯಕೀಯ ಶಿಕ್ಷಣ, ಬೆಂಗಳೂರು

**(ಎನ್. ಶಿವಶೈಲಂ)**
**ಸರ್ಕಾರದ ಪ್ರಧಾನ ಕಾರ್ಯದರ್ಶಿ**
**ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ**

| ವಿಷಯ ಸೂಚಿ ಸಂಖ್ಯೆ. – 15 | ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಬೋಧಕೇತರ ಸಿಬ್ಬಂದಿಗಳಿಗೆ ಹುದ್ದೆಯ ಮೂಲ ವೇತನಕ್ಕೆ ರೂ. 10/–ಗಳನ್ನು ಕಡಿತಗೊಳಿಸಿ ಪಾವತಿಸಲು ಅನುಮೋದನೆ ನೀಡುವ ಬಗ್ಗೆ. |
|---|---|

ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಪ್ರಾರಂಭದ ಹಂತದಲ್ಲಿ ಭಾರತೀಯ ವೈದ್ಯಕೀಯ ಮಂಡಳಿಯ ಸವೀಕರಣಕ್ಕೆ ಹಾಗೂ ಸಂಸ್ಥೆಯ ಆಡಳಿತಾತ್ಮಕ ಹಿತದೃಷ್ಟಿಯಿಂದ ಸರ್ಕಾರದಿಂದ ರಿಮ್ಸ್ ಸಂಸ್ಥೆಗೆ ಮಂಜೂರಾದ ಹುದ್ದೆಗಳಿಗೆ ಎದುರಾಗಿ ಅವಶ್ಯವಿರುವ ಬೋಧಕೇತರ ಸಿಬ್ಬಂದಿಗಳನ್ನು ಸಂಚಿತ ವೇತನದ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲಾಗಿತ್ತು. ಸಂಚಿತ ವೇತನದಲ್ಲಿ ಕಾರ್ಯನಿರ್ವಹಿಸುತ್ತಿರುವ ವಿವಿಧ ಬೋಧಕೇತರ ಸಿಬ್ಬಂದಿಗಳು ಈ ಸಂಸ್ಥೆಯ ಸಮಗ್ರ ಅಭಿವೃದ್ಧಿ ಹಾಗು ಆಡಳಿತ ಸುಗಮವಾಗಿ ಸಾಗಿಸುವಲ್ಲಿ ಮತ್ತು ಭಾರತೀಯ ವೈದ್ಯಕೀಯ ಪರಿಷತ್ತಿನ ಅನುಮೋದನೆ ಪಡೆಯಲು ಹಗಲು ರಾತ್ರಿ ಅವಿರತ ಪ್ರಯತ್ನ ಮಾಡಿರುತ್ತಾರೆ. ಇದಲ್ಲದೆ ದಿನಂಪ್ರತಿ ಸರ್ಕಾರದೊಂದಿಗೆ ಪತ್ರ ವ್ಯವಹಾರ, ಕಡತಗಳ ರಕ್ಷಣೆ, ಸಿಬ್ಬಂದಿಗಳ ಕ್ಷೇಮಪಾಲನೆ (ನೇಮಕಾತಿ, ಪದೋನ್ನತಿ, ವೇತನ ಬಡ್ತಿ) ಸೇರಿದಂತೆ, ಕಟ್ಟಡ ಮತ್ತು ಕಾಮಗಾರಿಗಳ ವಿವರ, ಸಿಬ್ಬಂದಿ ವೆಚ್ಚ, ವಸ್ತುಗಳ ಖರೀದಿ ಮತ್ತು ನಿರ್ವಹಣೆ, ಲೆಕ್ಕ ಪತ್ರ ನಿರ್ವಹಣೆ, ಭಾರತೀಯ ವೈದ್ಯಕೀಯ ಮಂಡಳಿಯ ಕಾರ್ಯಕಲಾಪಗಳು, ರಾಜೀವ್ ಗಾಂಧಿ ವಿಶ್ವವಿದ್ಯಾಲಯದ ಜೊತೆಗೆ ಶೈಕ್ಷಣಿಕ ಮತ್ತು ಪರೀಕ್ಷೆಗಳ ನಿರ್ವಹಣೆ, ಇಲಾಖಾ ನಿರ್ವಹಣೆ, ಶೈಕ್ಷಣಿಕ ವ್ಯವಹಾರಗಳ ಕಾರ್ಯಗಳು, ವಿದ್ಯಾರ್ಥಿಗಳ ಪ್ರವೇಶ, ಪರೀಕ್ಷೆ ಮತ್ತು ಅವರ ಕ್ಷೇಮ ಪಾಲನೆ ವ್ಯವಹಾರಗಳನ್ನು

ನೋಡಿಕೊಳ್ಳುತ್ತಿರುವ ಈ ಲಿಪಿಕ ಸಿಬ್ಬಂದಿಗಳು ಸಂಪೂರ್ಣ ಅನುಭವವನ್ನು ಹೊಂದಿದ್ದು, ಈವರಿಗೆ ವಹಿಸಿರುವ ಜವಾಬ್ದಾರಿಯನ್ನು ಚಾಚು ತಪ್ಪದೇ ನೆರವೇರಿಸಿ, ಖಾಯಂ ನೌಕರರಷ್ಟೇ ಜವಾಬ್ದಾರಿಯುತವಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಆದರೆ ಇವರಿಗೆ ನೀಡುತ್ತಿರುವ ವೇತನವು ತುಂಬಾ ಕಡಿಮೆಯಿರುತ್ತದೆ. ಅಲ್ಲದೇ ಖಾಯಂ ನೌಕರರಿಗೆ ನೀಡುತ್ತಿರುವ ಯಾವುದೇ ಪೂರಕ ಸೌಲಭ್ಯಗಳನ್ನು ಇವರಿಗೆ ನೀಡುತ್ತಿಲ್ಲ.

ಅತಿ ಕಡಿಮೆ ವೇತನ ಇರುವುದಿರಂದ ಇವರನ್ನು ಅವಲಂಬಿಸಿದ ಪೋಷಕರನ್ನು ಮತ್ತು ಕುಟುಂಬ ಸದಸ್ಯರನ್ನು ಪೋಷಿಸುವುದು, ಮಕ್ಕಳಿಗೆ ಸೂಕ್ತ ವಿದ್ಯಾಭ್ಯಾಸ ಒದಗಿಸುವುದು ಹಾಗೂ ಜೀವನ ನಿರ್ವಹಣೆ ತುಂಬಾ ಕಷ್ಟಕರವಾಗಿರುತ್ತದೆ ಎಂದು ಸಾಕಷ್ಟು ಬಾರಿ ತಮ್ಮ ಅಳಲನ್ನು ತೋಡಿಕೊಂಡಿರುತ್ತಾರೆ. ದಿನದಿಂದ ದಿನಕ್ಕೆ ಏರುತ್ತಿರುವ ಮಾರುಕಟ್ಟೆಯ ಬೆಲೆಗಳ ಹೊಡೆತಕ್ಕೆ ತತ್ತರಿಸಿ, ಅಸಹನೀಯ ಸ್ಥಿತಿಯಲ್ಲಿ ಇವರು ಜೀವನವನ್ನು ನಡೆಸುತ್ತಿದ್ದೇವೆ ಎಂದು ತಿಳಿಸಿರುತಾರೆ.

ಈ ಸಂಸ್ಥೆಯಲ್ಲಿ ಒಟ್ಟು ಮಂಜೂರಾದ ಬೋಧಕೇತರ ಹುದ್ದೆಗಳಲ್ಲಿ ಕೇವಲ ಒರ್ವ ಪ್ರ.ದ.ಸ ನೌಕರರು ಮತ್ತು ಒರ್ವ ದ್ವಿ.ದ.ಸ ನೌಕರರು ಮಾತ್ರ ನಿಯೋಜನೇ ಮೇಲೆ ಕಾರ್ಯನಿರ್ವಹಿಸುತ್ತಿದ್ದು, ಸಂಸ್ಥೆಯ ಎಲ್ಲಾ ಕೆಲಸ ಕಾರ್ಯಗಳನ್ನು ಸಂಚಿತ ವೇತನದಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳೇ ಜವಾಬ್ದಾರಿಯುತವಾಗಿ ನಿರ್ವಹಿಸುತ್ತಿರುತ್ತಾರೆ.

ಈ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಸಂಚಿತ ವೇತನದ ಸಿಬ್ಬಂದಿಗಳು ಹೈದ್ರಾಬಾದ್ – ಕರ್ನಾಟಕದ ವ್ಯಾಪ್ತಿಗೆ ಒಳಪಡುವುದರಿಂದ ಹಾಗೂ ಆರ್ಥಿಕವಾಗಿ ತುಂಬಾ ಹಿಂದುಳಿದವರಾಗಿರುತ್ತಾರೆ ಹಾಗೂ ಹುದ್ದೆಗೆ ಅವಶ್ಯವಿರುವ ವಿದ್ಯಾರ್ಹತೆಯ ಜೊತೆಗೆ ಸೇವಾನುಭವವನ್ನು ಹೊಂದಿರುತ್ತಾರೆ.

ಕಾರಣ ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ವಿವಿಧ ಬೋಧಕೇತರ ಸಿಬ್ಬಂದಿಗಳಿಗೆ ಹುದ್ದೆಯ ಮೂಲ ವೇತನಕ್ಕೆ ರೂ. 10/–ಗಳನ್ನು ಕಡಿತಗೊಳಿಸಿ ಪಾವತಿಸುವ ಬಗ್ಗೆ ಆರ್ಥಿಕ ಸಮಿತಿ ಸಭೆಯ ಅನುಮೋದನೆ ಕೋರಿ ಸಲ್ಲಿಸಿದೆ.

(ಸೈಯದ್ ಜೀಯಾವುದ್ದೀನ್)
ಸದಸ್ಯ ಕಾರ್ಯದರ್ಶಿ,
ಹಾಗು ಆರ್ಥಿಕ ಸಲಹೆಗಾರರು,
ರಿಮ್ಸ್ ಆರ್ಥಿಕ ಸಮಿತಿ,
ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,
ರಾಯಚೂರು

(ಡಾ. ತಿಪ್ಪೇರುದ್ರಯ್ಯ. ಸಿ)
ನಿರ್ದೇಶಕರು
ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,
ರಾಯಚೂರು

(ಎನ್. ಶಿವಶೈಲಂ) ಭಾ.ಆ.ಸೇ
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಹಾಗು ಅಧ್ಯಕ್ಷರು, ರಿಮ್ಸ್ ಆರ್ಥಿಕ ಸಮಿತಿ,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ,
ವೈದ್ಯಕೀಯ ಶಿಕ್ಷಣ, ಬೆಂಗಳೂರು

(ಎನ್. ಶಿವಶೈಲಂ)
ಸರ್ಕಾರದ ಪ್ರಧಾನ ಕಾರ್ಯದರ್ಶಿ
**ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ**

ಸಭೆಯ ತೀರ್ಮಾನ :-

ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯು ಕರ್ನಾಟಕ ಸರ್ಕಾರದ ಸ್ವಾಯತ್ತ ಸಂಸ್ಥೆಯಾಗಿರುವುದರಿಂದ ಸಂಸ್ಥೆಯೇ ನೇಮಕಾತಿ ನಿಯಮಾವಳಿಗಳನ್ನು ಸಿದ್ದಪಡಿಸಿಕೊಂಡು, ಭಾರತೀಯ ವೈದ್ಯಕೀಯ ಮಂಡಳಿಯ ನಿಯಮದಂತೆ ಸರ್ಕಾರದ ಆದೇಶ ಸಂಖ್ಯೆ. ಆಕುಕ / 266 / ಎಂಪಿಎಸ್ / 2006 ದಿನಾಂಕ 12.06.2006ರನ್ವಯ ಮಂಜೂರು ಆಗಿ ಖಾಲಿ ಇರುವ ಎಲ್ಲಾ ಬೋಧಕೇತರ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳುವಂತೆ ಹಾಗೂ ಇದೇ ನೇಮಕಾತಿ ಪ್ರಕ್ರಿಯೆಯಲ್ಲಿ ರಿಮ್ಸ್ ಸಂಸ್ಥೆಯಲ್ಲಿ ಸರ್ಕಾರದಿಂದ ಹುದ್ದೆಗಳು ಮಂಜೂರಾಗಿ ಸದರಿ ಹುದ್ದೆಗಳ ಎದುರಾಗಿ ಸಂಚಿತ ವೇತನದಲ್ಲಿ ಕಾರ್ಯನಿರ್ವಹಿಸುತ್ತಿರುವ ವಿವಿಧ ಬೋಧಕೇತರ ಸಿಬ್ಬಂದಿಗಳ ನೇರ ನೇಮಕಾತಿಯಲ್ಲಿ ಅರ್ಹತೆಯಿದ್ದಲ್ಲಿ ಪರಿಗಣಿಸುವಂತೆ, ನಿರ್ದೇಶಕರು, ರಿಮ್ಸ್, ರಾಯಚೂರು ಇವರಿಗೆ ಸೂಚಿಸಲಾಯಿತು.

| | |
|---|---|
| ವಿಷಯ ಸೂಚಿ ಸಂಖ್ಯೆ. – 16 | ಅಧ್ಯಕ್ಷರ ಅಪ್ಪಣೇ ಮೇರೆಗೆ ಇನ್ನಿತರ ವಿಷಯಗಳು |

ಸಭೆಯ ತೀರ್ಮಾನ :

ಅಧ್ಯಕ್ಷರ ಅಪ್ಪಣೇ ಮೇರೆಗೆ ಚರ್ಚಿಸಲು ಯಾವುದೇ ವಿಷಯಗಳು ಇಲ್ಲದೇ ಇದ್ದುದರಿಂದ ಸಭೆಯನ್ನು ವಂದನೆಗಳೊಂದಿಗೆ ಮುಕ್ತಾಯಗೊಳಿಸಲಾಯಿತು.

(ಸೈಯದ್ ಜೀಯಾವುದ್ದೀನ್)
ಸದಸ್ಯ ಕಾರ್ಯದರ್ಶಿ,
ಹಾಗು ಆರ್ಥಿಕ ಸಲಹೆಗಾರರು,
ರಿಮ್ಸ್ ಆರ್ಥಿಕ ಸಮಿತಿ,
ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ.
ರಾಯಚೂರು

(ಡಾ. ತಿಪ್ಪೇರುದ್ರಯ್ಯ. ಸಿ)
ನಿರ್ದೇಶಕರು
ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,
ರಾಯಚೂರು

(ಎನ್. ಶಿವಶೈಲಂ) ಭಾ.ಆ.ಸೇ
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಹಾಗು ಅಧ್ಯಕ್ಷರು, ರಿಮ್ಸ್ ಆರ್ಥಿಕ ಸಮಿತಿ,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ,
ವೈದ್ಯಕೀಯ ಶಿಕ್ಷಣ, ಬೆಂಗಳೂರು

**(ಎನ್. ಶಿವಶೈಲಂ)**
**ಸರ್ಕಾರದ ಪ್ರಧಾನ ಕಾರ್ಯದರ್ಶಿ**
**ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ**